# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ನಾದಬ್ರಹ್ಮ ಸಂಸ್ಥೆ ನಾಗಪುರದಲ್ಲಿ ಆಯೋಜಿಸಿದ್ದ 'ಸ್ವತಂತ್ರತಾ ಕಾ ಸ್ವರಾಭಿಷೇಕ್' ದೇಶಭಕ್ತಿ ಮತ್ತು ಸಾಂಸ್ಕೃತಿಕ ಗೀತೆ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ವಿದ್ಯಾರ್ಥಿಗಳೊಂದಿಗೆ.


ಸಂಪುಟ : 46 | ಸಂಚಿಕೆ : 13 | ಆಶ್ವಯುಜ-ಕಾರ್ತಿಕ | ಕಲಿಯುಗಾಬ್ದ 5126 | 01-11-2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಶಕ್ತಿ ಮತ್ತು ಶೀಲವೇ ಉನ್ನತಿಗೆ ಆಧಾರ : ಡಾ. ಮೋಹನ್ ಭಾಗವತ್

## ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರ ವಿಜಯದಶಮಿ ಭಾಷಣ – 2024

ಈ ವರ್ಷ ಪುಣ್ಯಶ್ಲೋಕ ಅಹಲ್ಯಾ ದೇವಿ ಹೋಳ್ಕರ್ ಅವರ 300ನೇ ಜಯಂತಿಯನ್ನು ಆಚರಿಸುತ್ತಿದ್ದೇವೆ. ದೇವಿ ಅಹಲ್ಯಾಬಾಯಿ ಓರ್ವ ಕುಶಲ ರಾಜ್ಯ ಆಡಳಿತಗಾರ್ತಿ, ಪ್ರಜಾಹಿತದಕ್ಷ ಕರ್ತವ್ಯನಿಷ್ಠ ರಾಣಿ, ಧರ್ಮ, ಸಂಸ್ಕೃತಿ ಮತ್ತು ದೇಶದ ಅಭಿಮಾನಿ, ಶೀಲಸಂಪನ್ನತೆಯ ಉತ್ತಮ ಆದರ್ಶ ಹಾಗೆಯೇ ರಣನೀತಿಯನ್ನು ಉತ್ಕೃಷ್ಟವಾಗಿ ನಿರ್ಮಿಸುವ ನಿಪುಣೆ ರಾಣಿಯಾಗಿದ್ದರು.

ಆರ್ಯ ಸಮಾಜದ ಸಂಸ್ಥಾಪಕ ಮಹರ್ಷಿ ದಯಾನಂದ ಸರಸ್ವತಿ ಅವರ 200ನೇ ವರ್ಷದ ಜನ್ಮಜಯಂತಿಯನ್ನೂ ಇದೇ ವರ್ಷ ಆಚರಿಸಲಾಗುತ್ತಿದೆ. ಪರಾಧೀನತೆಯಿಂದ ಮುಕ್ತರಾಗಿ ಕಾಲದ ಪ್ರವಾಹದಲ್ಲಿ ಆಚಾರ ಧರ್ಮ ಮತ್ತು ಸಾಮಾಜಿಕ ರೀತಿರಿವಾಜುಗಳಲ್ಲಿ ಬಂದಂತಹ ವಿಕೃತಿಗಳನ್ನು ದೂರಗೊಳಿಸಿ, ಸಮಾಜಕ್ಕೆ ತನ್ನ ಮೂಲ ಶಾಶ್ವತ ಮೌಲ್ಯಗಳ ಮೇಲೆ ನಿಲ್ಲುವಂತೆ ಮಾಡಲು ಪ್ರಚಂಡ ಪ್ರಯತ್ನವನ್ನು ಅವರು ಮಾಡಿದರು. ಭರತವರ್ಷದ ನವೋತ್ಥಾನದ ಪ್ರೇರಕಶಕ್ತಿಗಳಲ್ಲಿ ಅವರ ಹೆಸರು ಪ್ರಮುಖವಾಗಿದೆ.

ಭಗವಾನ್ ಬಿರ್ಸಾ ಮುಂಡಾ ಅವರ ಜನ್ಮಜಯಂತಿಯ 150ನೇ ವರ್ಷದ ಸಂಭ್ರಮಾಚರಣೆಯು ಇದೇ ನವೆಂಬರ್ 15 ರಿಂದ ಪ್ರಾರಂಭವಾಗಲಿದೆ. ಈ ನೂರೈವತ್ತನೇ ಜಯಂತಿ ಬುಡಕಟ್ಟು ಜನರನ್ನು ಗುಲಾಮಗಿರಿ ಮತ್ತು ಶೋಷಣೆಯಿಂದ, ಸ್ವದೇಶದ ಮೇಲಿರುವ ವಿದೇಶಿ ವರ್ಚಸ್ಸನ್ನು ಮುಕ್ತಗೊಳಿಸಲು, ಅಸ್ತಿತ್ವ ಮತ್ತು ಅಸ್ಮಿತೆಯನ್ನು ರಕ್ಷಿಸುವ ಜೊತೆಗೆ ಸ್ವಾಭಿಮಾನವನ್ನು ರಕ್ಷಿಸಲು ಭಗವಾನ್ ಬಿರ್ಸಾ ಮುಂಡಾ ಅವರ ಮೂಲಕ ಪ್ರವರ್ತಿತ ಮಹಾಬಂಡಾಯದ (ಉಲ್ಗುಲಾನ್) ಪ್ರೇರಣೆಯ ಸ್ಮರಣೆಯನ್ನು ನಮಗೆ ಮಾಡಿಕೊಡುತ್ತದೆ.

**ದೇಶವಿರೋಧಿ ಕುತಂತ್ರಗಳು:** ಇತ್ತೀಚೆಗೆ ಬಾಂಗ್ಲಾದೇಶದಲ್ಲಿ ನಡೆದ ಹಿಂಸಾತ್ಮಕ ದಂಗೆಯ ತಾತ್ಕಾಲಿಕ ಮತ್ತು ಸ್ಥಾನೀಯ ಕಾರಣಗಳು ಈ ಘಟನಾಕ್ರಮದ ಒಂದು ಮುಖ ಮಾತ್ರ. ಹಾಗೆಯೆ ಅಲ್ಲಿರುವ ಹಿಂದೂ ಸಮಾಜದ ಮೇಲೆ ಯಾವುದೇ ಕಾರಣವಿಲ್ಲದೇ ನಡೆಯುವ ಅಮಾನವೀಯ ಅತ್ಯಾಚಾರದ ಪರಂಪರೆ ಮತ್ತೆ ಮರುಕಳಿಸಿತು. ಆ ದೌರ್ಜನ್ಯದ ವಿರುದ್ಧ ಅಲ್ಲಿನ ಹಿಂದುಗಳು ಈ ಬಾರಿ ಸಂಘಟಿತರಾಗಿ ತಮ್ಮನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ಮನೆಯಿಂದ ಹೊರಬಂದು ವಿರೋಧಿಸಿದ್ದರಿಂದ ಸ್ವಲ್ಪ ಬಚಾವಾದರು. ಆದರೆ ಎಲ್ಲಿಯವರೆಗೂ ಅಲ್ಲಿ ಮೂಲಭೂತವಾದಿ ಸ್ವಭಾವ ಇರುತ್ತದೆಯೋ, ಅಲ್ಲಿನ ಹಿಂದೂಗಳ ಸಹಿತ ಎಲ್ಲಾ ಅಲ್ಪಸಂಖ್ಯಾತ ಸಮುದಾಯಗಳ ತಲೆಯ ಮೇಲೆ ಅಪಾಯದ ತೂಗುಗತ್ತಿ ನೇತಾಡುತ್ತಲೇ ಇರುತ್ತದೆ. ಆದ್ದರಿಂದ ಆ ದೇಶದಿಂದ ಭಾರತಕ್ಕೆ ಒಳನುಸುಳುತ್ತಿರುವ ಮತ್ತು ಅದರ ಕಾರಣದಿಂದಾಗಿ ಇಲ್ಲಿ ಉದ್ಭವಿಸುತ್ತಿರುವ ಜನಸಂಖ್ಯಾ ಅಸಮತೋಲನವು ಇಲ್ಲಿನ ಸಾಮಾನ್ಯ ಜನರನ್ನು ಬಾಧಿಸುವ ಚಿಂತೆಯ ವಿಷಯವಾಗಿದೆ. ಪರಸ್ಪರ ಸೌಹಾರ್ದತೆ ಮತ್ತು ದೇಶದ ಸುರಕ್ಷತೆಯ ಮೇಲೂ ಈ ಒಳನುಸುಳುವಿಕೆ ಗಂಭೀರವಾದ ಪ್ರಶ್ನೆಯನ್ನು ಮೂಡಿಸುತ್ತದೆ. ಉದಾರತೆ, ಮಾನವತೆ ಹಾಗೂ ಸದ್ಭಾವನೆಯ ಪರವಾಗಿರುವ ಎಲ್ಲರ, ವಿಶೇಷವಾಗಿ ಭಾರತ ಸರ್ಕಾರ ಮತ್ತು ವಿಶ್ವಾದ್ಯಂತ ನೆಲೆಸಿರುವ ಹಿಂದೂಗಳ ಸಹಾಯವೊಂದೇ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳಿಗೆ ಅಗತ್ಯವಿರುವ ವಿಚಾರ. ಅಸಂಘಟಿತವಾಗಿರುವುದು ಅಥವಾ ದುರ್ಬಲರಾಗಿ ಉಳಿಯುವುದು ದುಷ್ಟರಿಂದ ದೌರ್ಜನ್ಯವನ್ನು ಆಹ್ವಾನಿಸುವುದು ಎಂಬ ಪಾಠವನ್ನು ಪ್ರಪಂಚದಾದ್ಯಂತದ ಹಿಂದೂ ಸಮಾಜವೂ ಗ್ರಹಿಸಬೇಕು. ಆದರೆ ವಿಷಯ ಇಲ್ಲಿಗೆ ನಿಲ್ಲುವುದಿಲ್ಲ. ಈಗ ಭಾರತದಿಂದ ತಪ್ಪಿಸಿಕೊಳ್ಳಲು ಪಾಕಿಸ್ತಾನದ ಜೊತೆ ಸೇರುವ ಮಾತುಗಳು ಕೇಳಿಬರುತ್ತಿವೆ. ಇಂತಹ ಕಥನ (Narrative)ಗಳನ್ನು ಸೃಷ್ಟಿಸಿ, ಸ್ಥಾಪಿಸುವ ಮೂಲಕ ಭಾರತದ ಮೇಲೆ ಒತ್ತಡ ಹೇರಲು ಯಾವ ದೇಶಗಳು ಬಯಸುತ್ತವೆ ಎಂದು ಹೇಳಬೇಕಾಗಿಲ್ಲ.

'ಡೀಪ್ ಸ್ಟೇಟ್', 'ವೋಕಿಸಂ', 'ಕಲ್ಚರಲ್ ಮಾರ್ಕ್ಸಿಸ್ಟ್' ಇಂತಹ ಶಬ್ದಗಳು ಇತ್ತೀಚೆಗಿನ ದಿನಗಳಲ್ಲಿ ಚರ್ಚೆಯಲ್ಲಿವೆ. ವಾಸ್ತವವಾಗಿ,





ಅವರು ಎಲ್ಲಾ ಸಾಂಸ್ಕೃತಿಕ ಸಂಪ್ರದಾಯಗಳ ಘೋಷಿತ ಶತ್ರುಗಳು. ಸಾಂಸ್ಕೃತಿಕ ಮೌಲ್ಯಗಳು, ಸಂಪ್ರದಾಯಗಳು ಮತ್ತು ಯಾವುದನ್ನು ಒಳ್ಳೆಯದು ಅಥವಾ ಮಂಗಳಕರವೆಂದು ಪರಿಗಣಿಸಲಾಗಿದೆಯೋ ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಈ ಗುಂಪಿನ ಕಾರ್ಯವೈಖರಿಯ ಒಂದು ಭಾಗವಾಗಿದೆ. ಸಮಾಜದ ಮನಸ್ಸನ್ನು ರೂಪಿಸುವ ವ್ಯವಸ್ಥೆಗಳು ಮತ್ತು ಸಂಸ್ಥೆಗಳು, ಉದಾ. ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಣ ಸಂಸ್ಥೆಗಳು, ಸಂವಹನ ಮಾಧ್ಯಮ, ಬೌದ್ಧಿಕ ಸಂವಾದ ಇತ್ಯಾದಿಗಳನ್ನು ತಮ್ಮ ಪ್ರಭಾವಕ್ಕೆ ತಂದು ಅವುಗಳ ಮೂಲಕ ಸಮಾಜದ ವಿಚಾರ, ಸಂಸ್ಕಾರ ಮತ್ತು ನಂಬಿಕೆಗಳನ್ನು ನಾಶಪಡಿಸುವುದು ಅವರ ಕಾರ್ಯವೈಖರಿಯ ಮೊದಲ ಹೆಜ್ಜೆಯಾಗಿದೆ. ಒಟ್ಟಿಗೆ ವಾಸಿಸುವ ಸಮಾಜದಲ್ಲಿ, ಯಾವುದೇ ಘಟಕವು ಅದರ ವಾಸ್ತವಿಕ ಅಥವಾ ಕೃತಕವಾಗಿ ರಚಿಸಲಾದ ಅನನ್ಯತೆ, ಬೇಡಿಕೆ, ಅವಶ್ಯಕತೆ ಅಥವಾ ಸಮಸ್ಯೆಯ ಆಧಾರದ ಮೇಲೆ ಪ್ರತ್ಯೇಕಿಸಲು ಪ್ರೇರೇಪಿಸುತ್ತದೆ. ಅವರಲ್ಲಿ ಅನ್ಯಾಯಗ್ರಸ್ಥ ಭಾವನೆಯನ್ನು ಸೃಷ್ಟಿಸಲಾಗುತ್ತದೆ. ಅವರ ಅತೃಪ್ತಿಯ ವಾತಾವರಣವನ್ನು ಗಮನಿಸಿ, ಆ ಘಟಕವು ಸಮಾಜದ ಉಳಿದ ಭಾಗಗಳಿಗಿಂತ ಭಿನ್ನವಾಗಿ ಮತ್ತು ವ್ಯವಸ್ಥೆಯ ವಿರುದ್ಧವಾಗಿ, ಆಕ್ರಮಣಕಾರಿಯಾಗಿಸುತ್ತದೆ. ಸಮಾಜದಲ್ಲಿ ಸಂಘರ್ಷಕ್ಕೆ ಎಡೆಮಾಡಿಕೊಡುವ ಸಂಭಾವ್ಯತೆ – fault linesಗಳನ್ನೂ ಕಂಡುಹಿಡಿದು ನೇರ ಸಂಘರ್ಷಗಳು ಸೃಷ್ಟಿಯಾಗುವಂತೆ ಮಾಡಲಾಗುತ್ತಿದೆ. ವ್ಯವಸ್ಥೆ, ಕಾನೂನು, ಆಡಳಿತ ಇತ್ಯಾದಿಗಳ ಬಗ್ಗೆ ಅಶ್ರದ್ಧೆ ಮತ್ತು ದ್ವೇಷವನ್ನು ತೀವ್ರಗೊಳಿಸುವ ಮೂಲಕ ಅರಾಜಕತೆ ಮತ್ತು ಭಯದ ವಾತಾವರಣವನ್ನು ಸೃಷ್ಟಿಸಲಾಗುತ್ತದೆ. ಇದರಿಂದ ಆ ದೇಶದ ಮೇಲೆ ಪ್ರಾಬಲ್ಯ ಸ್ಥಾಪಿಸಲು ಅನುಕೂಲವಾಗುತ್ತದೆ.

ಪಾಶ್ಚಿಮಾತ್ಯ ಪ್ರಪಂಚದ ಮುಂದುವರಿದ ದೇಶಗಳಲ್ಲಿ ಈ ಮಂತ್ರವಿಪ್ಲವದ ಪರಿಣಾಮವಾಗಿ, ಜೀವನದ ಸ್ಥಿರತೆ, ಶಾಂತಿ ಮತ್ತು ಸಮೃದ್ಧಿಯು ಬಿಕ್ಕಟ್ಟಿಗೆ ಸಿಲುಕಿರುವುದು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ತಥಾಕಥಿತ "ಅರಬ್ ಸ್ಪ್ರಿಂಗ್" ನಿಂದ ಪ್ರಾರಂಭಿಸಿ ನೆರೆಯ ಬಾಂಗ್ಲಾದೇಶದಲ್ಲಿ ಏನಾಯಿತು ಎಂಬುದರವರೆಗೆ ಈ ಪದ್ಧತಿಯು ಕಾರ್ಯನಿರ್ವಹಿಸಿದ್ದನ್ನು ನಾವು ನೋಡಿದ್ದೇವೆ. ಭಾರತದಾದ್ಯಂತ ನಾಲ್ಕೂ ದಿಕ್ಕುಗಳಲ್ಲಿ ವಿಶೇಷವಾಗಿ ಗಡಿಪ್ರದೇಶ ಮತ್ತು ಬುಡಕಟ್ಟು ಜನನಿಬಿಡ ಪ್ರದೇಶಗಳಲ್ಲಿ ಇಂತಹ ದುಷ್ಟ ಪ್ರಯತ್ನಗಳನ್ನು ನಾವು ನೋಡುತ್ತಿದ್ದೇವೆ.

**ಸಂಸ್ಕಾರ ಕ್ಷೀಣತೆಯ ದುಷ್ಪರಿಣಾಮ:** ವಿಭಿನ್ನ ವ್ಯವಸ್ಥೆಗಳು ಮತ್ತು ಸಂಸ್ಥೆಗಳ ಮೂಲಕ ಹರಡಿರುವ ವಿಕೃತ ಪ್ರಚಾರ ಮತ್ತು ಕೆಟ್ಟ ಮೌಲ್ಯಗಳು ಭಾರತದಲ್ಲಿ, ವಿಶೇಷವಾಗಿ ಹೊಸ ಪೀಳಿಗೆಯ ಮನಸ್ಸು, ಮಾತು ಮತ್ತು ಕ್ರಿಯೆಗಳ ಮೇಲೆ ದುಷ್ಪರಿಣಾಮ ಬೀರುತ್ತಿವೆ. ದೊಡ್ಡವರ ಜೊತೆಗೆ ಮಕ್ಕಳ ಕೈಗೂ ಮೊಬೈಲ್ ಫೋನ್ ಬಂದಿದೆ. ಅಲ್ಲಿ ಏನು ತೋರಿಸಲಾಗುತ್ತದೆ ಮತ್ತು ಮಕ್ಕಳು ಏನು ನೋಡುತ್ತಿದ್ದಾರೆ ಎಂಬುದರ ಮೇಲೆ ಸ್ವಲ್ಪವೂ ನಿಯಂತ್ರಣವಿಲ್ಲ. ಆ ವಿಷಯವನ್ನು (Content)ವನ್ನು ಉಲ್ಲೇಖಿಸುವುದೂ ನಮ್ಮ ಸಭ್ಯತೆಯ ಉಲ್ಲಂಘನೆಯಾಗುತ್ತದೆ, ಅದು ತುಂಬಾ ಬೀಭತ್ಸವಾಗಿದೆ. ನಮ್ಮ ಮನೆಗಳಲ್ಲಿ, ಕುಟುಂಬಗಳಲ್ಲಿ ಮತ್ತು ಸಮಾಜದಲ್ಲಿ ವಿಕೃತ ದೃಶ್ಯ-ಶ್ರಾವ್ಯ ವಿಷಯಗಳ ಮೇಲೆ ಕಾನೂನು ನಿಯಂತ್ರಣದ ತುರ್ತು ಅವಶ್ಯಕತೆ ಇದೆ ಎಂದೆನಿಸುತ್ತಿದೆ. ಯುವಪೀಳಿಗೆಯಲ್ಲಿ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವ ಮಾದಕ ವ್ಯಸನವೂ ಸಮಾಜವನ್ನು ಒಳಗೊಳಗೇ ಟೊಳ್ಳು ಮಾಡುತ್ತಿದೆ. ಒಳ್ಳೆಯತನಕ್ಕೆ ಕಾರಣವಾಗುವ ಮೌಲ್ಯಗಳನ್ನು ಪುನರುಜ್ಜೀವನಗೊಳಿಸಬೇಕಿದೆ.


**ಶಕ್ತಿಯ ಮಹತ್ವ:** ಈ ದೇಶವನ್ನು ಏಕಾತ್ಮ, ಸುಖ-ಶಾಂತಿಮಯ, ಸಮೃದ್ಧ ಮತ್ತು ಬಲಸಂಪನ್ನ ಮಾಡುವುದು ಪ್ರತಿಯೊಬ್ಬರ ಇಚ್ಛೆಯಾಗಿದೆ ಮತ್ತು ಸರ್ವರ ಕರ್ತವ್ಯವಾಗಿದೆ. ಇದರಲ್ಲಿ ಹಿಂದೂ ಸಮಾಜಕ್ಕೆ ಹೊಣೆಗಾರಿಕೆ ಹೆಚ್ಚಿದೆ. ಆದ್ದರಿಂದ ಸಮಾಜದಲ್ಲಿ ಒಂದು ವಿಶಿಷ್ಟ ಪ್ರಕಾರದ ಸ್ಥಿತಿ, ಜಾಗರೂಕತೆ ಹಾಗೂ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಸಂಘಟಿತ ಪ್ರಯತ್ನವನ್ನು ಮಾಡುವ ಅವಶ್ಯಕತೆಯಿದೆ. ಸಮಾಜವೇ ಸ್ವಯಂಜಾಗೃತಗೊಂಡಾಗ, ತನ್ನ ಭಾಗ್ಯವನ್ನು ತನ್ನ ಪುರುಷಾರ್ಥದಿಂದ ಬರೆದುಕೊಂಡಾಗ, ಮಹಾಪುರುಷರು, ಸಂಘಟನೆಗಳು, ಸಂಸ್ಥೆಗಳು, ಆಡಳಿತ ಇತ್ಯಾದಿಗಳೆಲ್ಲವೂ ಸಹಾಯ ಮಾಡುತ್ತವೆ. ದೇಹದ ಆರೋಗ್ಯಕರ ಸ್ಥಿತಿಯಲ್ಲಿ, ಸುಸ್ತು ಮೊದಲು ಬರುತ್ತದೆ ಮತ್ತು ರೋಗಗಳು ನಂತರ ಅದನ್ನು ಸುತ್ತುವರೆದಿರುತ್ತವೆ.

**ನಮ್ಮ ರಾಷ್ಟ್ರೀಯ ಜೀವನವು ಸಾಂಸ್ಕೃತಿಕ ಏಕಾತ್ಮತೆ ಮತ್ತು ಶ್ರೇಷ್ಠ ನಾಗರಿಕತೆಯ ಸುದೃಢ ಅಡಿಪಾಯದ ಮೇಲೆ ನಿಂತಿದೆ. ನಮ್ಮ ಸಾಮಾಜಿಕ ಜೀವನವು ಉದಾತ್ತ ಜೀವನ ಮೌಲ್ಯಗಳಿಂದ ಪ್ರೇರಿತವಾದದ್ದು ಮತ್ತು ಪೋಷಣೆಯಾದದ್ದು. ನಮ್ಮ ಇಂತಹ ರಾಷ್ಟ್ರೀಯ ಜೀವನಕ್ಕೆ ಹಾನಿ ಮಾಡುವ ಮತ್ತು ನಾಶಗೊಳಿಸುವ ದುಷ್ಟ ಪ್ರಯತ್ನಗಳನ್ನು ಬಹುಮುಂಚಿತವಾಗಿಯೇ ನಿಲ್ಲಿಸುವ ಅವಶ್ಯಕತೆ ಇದೆ. ಇದಕ್ಕಾಗಿ ಜಾಗೃತ ಸಮಾಜವೇ ಪ್ರಯತ್ನ ನಡೆಸಬೇಕಿದೆ. ಇದಕ್ಕಾಗಿ ನಮ್ಮ ಸಂಸ್ಕೃತಿಜನ್ಯ ಜೀವನದರ್ಶನ ಮತ್ತು ಸಂವಿಧಾನದತ್ತ ಮಾರ್ಗದ ಆಧಾರದ ಮೇಲೆ ಪ್ರಜಾತಾಂತ್ರಿಕ ಯೋಜನೆ ರೂಪಿಸಬೇಕು. ವೈಚಾರಿಕ ಮತ್ತು ಸಾಂಸ್ಕೃತಿಕ ಮಾಲಿನ್ಯವನ್ನು ಹರಡುವ ಈ ಷಡ್ಯಂತ್ರಗಳಿಂದ ಸಮಾಜವನ್ನು ಸುರಕ್ಷಿತವಾಗಿಡುವುದು ಇಂದಿನ ಅಗತ್ಯವಾಗಿದೆ.**

**ಸಮರಸತೆ ಮತ್ತು ಸದ್ಭಾವನೆ:** ಸಮಾಜದ ಸ್ವಸ್ಥ ಮತ್ತು ಸಬಲ ಸ್ಥಿತಿಯ ಮೊದಲ ಷರತ್ತು ಎಂದರೆ ಸಾಮಾಜಿಕ ಸಮರಸತೆ ಮತ್ತು ಸಮಾಜದ ವಿವಿಧ ವರ್ಗಗಳ ನಡುವಣ ಪರಸ್ಪರ ಸದ್ಭಾವನೆ. ಕೆಲವು ಸಂಕೇತಾತ್ಮಕ ಕಾರ್ಯಕ್ರಮಗಳನ್ನು ಮಾತ್ರ ಮಾಡುವುದರಿಂದ ಈ ಕಾರ್ಯ ಸಾಧ್ಯವಾಗುವುದಿಲ್ಲ. ಸಮಾಜದ ಎಲ್ಲಾ ವರ್ಗ ಮತ್ತು ಸ್ತರಗಳಲ್ಲಿ ವ್ಯಕ್ತಿಗಳ ಮತ್ತು ಕುಟುಂಬಗಳ ಮಿತ್ರತ್ವ ಇರಬೇಕು. ಇದನ್ನು ನಾವು ಮೊದಲು ವ್ಯಕ್ತಿಗತ ಮತ್ತು ಕುಟುಂಬದ ಹಂತದಲ್ಲಿ ಮಾಡಬೇಕು. ಪರಸ್ಪರರ ಹಬ್ಬ ಹರಿದಿನಗಳಲ್ಲಿ ಎಲ್ಲರೂ ಸಹಭಾಗಿಗಳಾಗಿ ಪೂರ್ಣ ಸಮಾಜದ ಹಬ್ಬವಾಗಿ ಆಚರಿಸಬೇಕು. ಸಾರ್ವಜನಿಕ ಉಪಯೋಗದ ಮತ್ತು ಶ್ರದ್ಧಾ ಸ್ಥಳಗಳಾದ ದೇವಸ್ಥಾನ, ನೀರಿನ ಮೂಲಗಳು, ಸ್ಮಶಾನ ಮುಂತಾದೆಡೆಯಲ್ಲಿ ಸಮಾಜದ ಎಲ್ಲಾ ವರ್ಗಗಳು ಸಹಭಾಗಿಗಳಾಗುವ ವಾತಾವರಣ ಇರಬೇಕು. ಸಮಾಜದ ವಿಭಿನ್ನ ವರ್ಗಗಳ ಅವಶ್ಯಕತೆಗಳು ಎಲ್ಲ ವರ್ಗಗಳ ಅರಿವಿಗೂ ಬರಬೇಕಿದೆ. ಹೇಗೆ ಒಂದು ಕುಟುಂಬದಲ್ಲಿ ಸಮರ್ಥರಾಗಿರುವವರು ದುರ್ಬಲವಾಗಿರುವವರಿಗೆ ಹೆಚ್ಚಿನ ಅವಕಾಶ ನೀಡುತ್ತಾರೆಯೋ, ಕೆಲವೊಮ್ಮೆ ತಮ್ಮ ನಷ್ಟವನ್ನೂ


*4ನೇ ಪುಟಕ್ಕೆ...*

## ಸಂಸ್ಮರಣೆ — ಶ್ರೀ ರತನ್ ಟಾಟಾ (28 ಡಿಸೆಂಬರ್ 1937 – 9 ಅಕ್ಟೋಬರ್ 2024)



ರತನ್ ಟಾಟಾ ಅವರು, 1937ರ ಡಿಸೆಂಬರ್ 28ರಂದು ಮುಂಬೈಯಲ್ಲಿ ಜನಿಸಿದರು. ತಂದೆ, ನಾವಲ್ ಟಾಟಾ ಹಾಗೂ ತಾಯಿ ಸೂನಿ ಟಾಟಾ. ರತನ್ ಟಾಟಾ ಅವರು ಹತ್ತು ವರ್ಷ ವಯಸ್ಸಿನವರಾಗಿದ್ದಾಗ ಅವರ ತಂದೆ – ತಾಯಿ ವಿಚ್ಛೇದನ ಪಡೆದುಕೊಂಡ ಮೇಲೆ ಅವರನ್ನು ಟಾಟಾ ಫ್ಯಾಮಿಲಿಯದ್ದೇ ಆದ ಜೆಎನ್ ಪೆಟಿಟ್ ಪಾರ್ಸಿ ಅನಾಥಾಲಯಕ್ಕೆ ಕಳುಹಿಸಿದರು. ಆದರೆ ನಂತರ ರತನ್ ಅವರ ಅಜ್ಜಿ, ನವಾಜ್ ಬಾಯಿ ಟಾಟಾ ಅವರು ರತನ್ ಟಾಟಾ ಅವರನ್ನು ಕಾನೂನಾತ್ಮಕವಾಗಿ ದತ್ತು ಪಡೆದರು. ಹಾಗಾಗಿ, ಅನಾಥಾಲಯದಿಂದ ತನ್ನ ತಂದೆ, ತಾತ ಇದ್ದ ಮನೆಗೆ ಹಿಂದಿರುಗಿದ ರತನ್ ಟಾಟಾ ತಮ್ಮ ಮಲಸಹೋದರ ನೋಯೆಲ್ ಟಾಟಾ ಅವರೊಂದಿಗೆ ಬೆಳೆಯುತ್ತಾರೆ. ನೋಯೆಲ್ ಟಾಟಾ ರತನ್ ಅವರ ಮಲತಾಯಿ ಮಗ.

ಬಾಂಬೆಯ ವಿವಿಧ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ನಂತರ, ಟಾಟಾ 1955ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಪ್ರೌಢಶಾಲೆಯನ್ನು ಮುಗಿಸಿದರು. ನಂತರ ಅವರು ನ್ಯೂಯಾರ್ಕ್‌ನ ಇಥಾಕಾದ ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಅಧ್ಯಯನದಲ್ಲಿ ತೊಡಗಿದರು.

ನಂತರ ಹಲವಾರು ಟಾಟಾ ಗ್ರೂಪ್ ವ್ಯವಹಾರಗಳಲ್ಲಿ ಅನುಭವವನ್ನು ಪಡೆದರು, 1971ರಲ್ಲಿ ನ್ಯಾಷನಲ್ ರೇಡಿಯೋ ಮತ್ತು ಎಲೆಕ್ಟ್ರಾನಿಕ್ಸ್ ಕಂಪನಿಯ ಪ್ರಭಾರ ನಿರ್ದೇಶಕರಾಗಿ ಹೆಸರಿಸಲ್ಪಟ್ಟರು. ಸರಿಸುಮಾರು ಒಂದು ದಶಕದ ನಂತರ ಟಾಟಾ ಇಂಡಸ್ಟ್ರೀಸ್‌ನ ಅಧ್ಯಕ್ಷರಾದರು. 1991ರಲ್ಲಿ ಅವರು ಟಾಟಾ ಗ್ರೂಪ್‌ನ ಮೂಲ ಕಂಪನಿಯಾದ ಟಾಟಾ ಸನ್ಸ್‌ನ ಅಧ್ಯಕ್ಷರಾಗಿ ಕೆಲಸ ಆರಂಭಿಸಿದರು.

ನಂತರದ ದಿನಗಳಲ್ಲಿ ಟಾಟಾ ಸಮೂಹವು ಜಾಗತಿಕ ಮಟ್ಟದಲ್ಲಿ ಉದ್ಯಮಿಗಳ ಕಣ್ಣು ಕುಕ್ಕುವಷ್ಟು ವೇಗವಾಗಿ ಬೆಳೆಯುತ್ತದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಸರು ಮಾಡಿದ್ದ ಟೆಟ್ಲಿ, ಕೋರಸ್, ಜಾಗ್ವಾರ್, ಲ್ಯಾಂಡ್ ರೋವರ್ ಹೀಗೆ ಅನೇಕ ಕಂಪನಿಗಳು ಟಾಟಾ ಸಮೂಹದ ತೆಕ್ಕೆಗೆ ಸೇರುತ್ತವೆ.

ಟಾಟಾ ಸನ್ಸ್ ಅದೆಷ್ಟೇ ಲಾಭ ಪಡೆದರೂ, ಶ್ರೀಮಂತರ ಪಟ್ಟಿಯ ಆರಂಭದಲ್ಲಿ ಕಾಣಿಸಿಕೊಳ್ಳಲೇ ಇಲ್ಲ. ಟಾಟಾ ಸಮೂಹದ ಸಂಸ್ಥಾಪಕರಾದ ಜಂಶದ್ ಜೀ ಟಾಟಾ ನೈತಿಕ ಮೌಲ್ಯಗಳ ಅಡಿಪಾಯವನ್ನು ಹಾಕಿ ವ್ಯಾಪಾರ ವ್ಯವಹಾರಗಳನ್ನು ಆರಂಭಿಸಿದವರು. ರತನ್ ಈ ಉದಾತ್ತ ಮೌಲ್ಯಗಳನ್ನು ಮುಂದುವರೆಸುತ್ತಾರೆ. ಟಾಟಾ ಸಮೂಹದ ಸುಮಾರು 60%ರಷ್ಟು ಲಾಭಾಂಶ ಸಾಮಾಜಿಕ ಕೆಲಸಗಳಿಗೆ ವಿನಿಯೋಗಿಸಲ್ಪಡುತ್ತದೆ. ರತನ್ ಟಾಟಾ ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಆರೋಗ್ಯ, ಗ್ರಾಮ ವಿಕಾಸ, ಶುಚಿತ್ವ ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮದೇ ರೀತಿಯಲ್ಲಿ ಕೊಡುಗೆ ಕೊಟ್ಟಿದ್ದಾರೆ.

2008ರಲ್ಲಿ ಟಾಟಾ ನ್ಯಾನೋವನ್ನು ಪ್ರಾರಂಭಿಸಿದರು. ಬಡ ಅಥವಾ ಮಧ್ಯಮ ವರ್ಗದ ಕುಟುಂಬಗಳಿಗೆ ಕೈಗೆಟುಕುವ ದರದಲ್ಲಿ ಕಾರು ಮಾರುಕಟ್ಟೆಗೆ ತಂದ ರತನ್ ಅವರು ಸಮಾಜ ಸೇವೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣ ಟಾಟಾ ಬ್ರ್ಯಾಂಡ್ ನ ಉತ್ಪನ್ನಗಳನ್ನು ಬಹುಬೇಗ ಜನಮನ ಗೆದ್ದವು. ಅದೇ ವರ್ಷ ಭಾರತ ಸರ್ಕಾರದಿಂದ ಅವರಿಗೆ ದೇಶದ ಎರಡನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮವಿಭೂಷಣವನ್ನು ನೀಡಲಾಯಿತು.

ದೇಶದಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ, ಕಡಿಮೆ ಖರ್ಚಿನಲ್ಲಿ ಜನಸಾಮಾನ್ಯರಿಗೆ ಹಲವು ಗಂಭೀರ ಕಾಯಿಲೆಗಳ ಚಿಕಿತ್ಸೆ ಸಿಗುವಂತೆ ಮಾಡಿದ್ದಾರೆ. ಇಲ್ಲಿವರೆಗೆ ಟಾಟಾ ಎಜುಕೇಷನ್ ಹಾಗೂ ಡೆವಲಪ್ ಮೆಂಟ್ ಟ್ರಸ್ಟ್ ವತಿಯಿಂದ 235 ಕೋಟಿ ರೂಪಾಯಿ ವಿವಿಧ ಕ್ಷೇತ್ರಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ರೂಪವಾಗಿ ನೀಡಲಾಗಿದೆ. ತಾಂತ್ರಿಕ ಶಿಕ್ಷಣವನ್ನು ನೀಡುವ ಟಾಟಾ ಸೆಂಟರ್ ಫಾರ್ ಟೆಕ್ನಾಲಜಿ ಆ್ಯಂಡ್ ಡಿಸೈನ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದರು.


9 ಅಕ್ಟೋಬರ್ 2024ರಂದು ರತನ್ ಟಾಟಾ ಅವರು 86ನೇ ವಯಸ್ಸಿನಲ್ಲಿ ನಿಧನರಾದರು. ಲಾಭ ಗಳಿಸುವುದರ ಹೊರತು ಸಮಾಜದ ಕಳಕಳಿಯನ್ನು ಹೊಂದಿದ್ದ ರತನ್ ಟಾಟಾ ದೂರದೃಷ್ಟಿ ಇದ್ದ ಉದ್ಯಮಿ. ಸಹಾನುಭೂತಿಗೆ ಇನ್ನೊಂದು ಮುಖವಾದ ಅವರ ವ್ಯಕ್ತಿತ್ವ ಅನುಕರಣೀಯ.

## ಮುಚ್ಚಿಟ್ಟ ಕರ್ನಾಟಕ ಚರಿತ್ರೆ

**ಲೇಖಕರು:** ಶ್ರೀ ರಾಕೇಶ್ ಶೆಟ್ಟಿ
**ಪ್ರಕಾಶಕರು:** ನಿಲುಮೆ ಪ್ರಕಾಶನ
**ಬೆಲೆ:** 350ರೂ.

ಪುಸ್ತಕ ಪರಿಚಯ

ಅಸಲಿ ಚರಿತ್ರೆಯನ್ನು ಚಾಲ್ತಿಗೆ ತರುವ ಭಾಗವಾಗಿ ಹಲವಾರು ಪುಸ್ತಕಗಳ ಅಧ್ಯಯನದ ಜೊತೆಗೆ, ಕ್ಷೇತ್ರ ಕಾರ್ಯವನ್ನೂ ಕೈಗೊಂಡು ಬರೆದಿರುವ ಪುಸ್ತಕ ಮುಚ್ಚಿಟ್ಟ ಕರ್ನಾಟಕ ಚರಿತ್ರೆ. ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ಮುಟ್ಟುವಂತೆ ಕರ್ನಾಟಕದ ಅಸ್ಮಿತೆಯನ್ನು ಉಳಿಸಿದ ವ್ಯಕ್ತಿಗಳ ಕುರಿತಾದ ಕಥಾನಕ ಈ ಹೊತ್ತಿಗೆಯಲ್ಲಿ ಅಚ್ಚೊತ್ತಿದೆ. ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ ಎಂಬ ನಾಣ್ಣುಡಿ ಈ ಪುಸ್ತಕದಲ್ಲಿ ಮತ್ತೆ ರುಜುವಾತಾಗಿದೆ. ಒಂದು ಕಡೆ ಟಿಪ್ಪು ಹೈದರಾಲಿ ಜತೆಗೆ ಸೇರಿಕೊಂಡ ಪೂರ್ಣಯ್ಯ ಇವರೆಲ್ಲರೂ ಸೇರಿ ಮೈಸೂರು ಸಂಸ್ಥಾನವನ್ನು ಮುಗಿಸಬೇಕೆಂಬ ಆಸೆಗೆ ಬಿದ್ದಾಗಲೇ ಮಹಾರಾಣಿಯಾಗಿದ್ದ ಲಕ್ಷ್ಮೀ ಅಮ್ಮಣ್ಣಿ ಆ ಮೂವರ ಪಾಲಿಗೆ ಮಾರಿಯಾದ ಘಟನಾವಳಿಯನ್ನು ಅದ್ಭುತವಾಗಿ ಅಕ್ಷರಗಳಲ್ಲಿ ಪೋಣಿಸಲಾಗಿದೆ. ಕರ್ನಾಟಕದ ಮುಚ್ಚಿಟ್ಟ ಚರಿತ್ರೆ, ನಮ್ಮದು ಶಕ್ತಿ ಆರಾಧಕರ ದೇಶ. ಮಹಾರಾಣಿಯವರ ಮೂಲಕ ಆ ಶಕ್ತಿ ಇಡೀ ಮೈಸೂರು ರಾಜ್ಯವನ್ನು ಉಳಿಸಿದ ಅಸಲಿ ಕಥೆಯನ್ನು ಉಲ್ಲೇಖಿಸುತ್ತದೆ.




ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

## ಪಂಕ್ತಿ (Queue)/ಸಾಲಲ್ಲಿ ನಿಲ್ಲುವ ಸ್ವಭಾವ ರೂಢಿಸಿಕೊಳ್ಳುವುದು

ನಾಗರಿಕ ಶಿಷ್ಟಾಚಾರ

ಸಾರ್ವಜನಿಕ ಸ್ಥಳಗಳಲ್ಲಿ, ಸಭೆ ಸಮಾರಂಭಗಳಲ್ಲಿ ಪಂಕ್ತಿ ಸಾಲನ್ನು ಪಾಲಿಸಿ ಎನ್ನುವ ಫಲಕವನ್ನು ಸಾಮಾನ್ಯವಾಗಿ ಕಾಣುತ್ತೇವೆ. ಪಂಕ್ತಿ ಸಾಲನ್ನು ಏಕೆ ಪಾಲಿಸಬೇಕು? ಅದು ಶಿಸ್ತಿನ ಸಂಕೇತ. ಅಂಗಳದಲ್ಲಿ ಇರುವೆಯ ಸಾಲು ಚೆಲ್ಲಾಪಿಲ್ಲಿಯಾಗಿ ಹರಡಿ ಹೋಗುವುದನ್ನು ನೋಡಿದಾಗ ಹಾಗೂ ಸಾಲಾಗಿ ಹೋಗುವುದನ್ನು ನೋಡಿದಾಗ ಮನಸ್ಸಿನಲ್ಲಿ ಬೇರೆ ಬೇರೆ ಭಾವನೆಗಳೇ ಉಂಟಾಗುತ್ತದೆ. ಸಾಲಿನ ಇರುವೆಗಳು ಕಣ್ಣಿಗೆ ಮುದವನ್ನು ನೀಡುತ್ತದೆ. ಹೀಗೆಯೇ ಮನುಷ್ಯರು ಕೂಡಾ ಪಂಕ್ತಿ ಸಾಲುಗಳಲ್ಲಿದ್ದರೆ ನೋಡುವವರ ಕಣ್ಣಿಗೆ ತುಂಬಾ ಶಿಸ್ತುಬದ್ಧವಾಗಿ, ನಾಗರಿಕ ಸಮಾಜದ ಪ್ರತೀಕವಾಗಿ ಕಂಡುಬರುತ್ತದೆ.



ಮೊದಲು ಬಂದವರಿಗೂ, ಕೊನೆಗೆ ಬಂದರಿಗೂ ಸ್ಥಾನಮಾನಗಳು ಒಂದೇ ಎಂದು ಅನಿಸಿದರೆ ಮೊದಲು ಬಂದ ವ್ಯಕ್ತಿಗೆ ಸಹಜವಾಗಿ ಬೇಸರವುಂಟಾಗುತ್ತದೆ. ಸರತಿ ಸಾಲು ಯಾವ ರೀತಿಯ ಭೇದಭಾವವನ್ನುಂಟು ಮಾಡದೆ, ನ್ಯಾಯವನ್ನು ಒದಗಿಸುತ್ತದೆ. ಇದರಿಂದ ಮೊದಲು ಬಂದವರ ಸಮಯವು ಉಳಿಯುತ್ತದೆ. ಕೊನೆಗೆ ಬಂದವರು ಆ ಸನ್ನಿಧಿಯಲ್ಲಿಯೋ, ಕಾರ್ಯಕ್ರಮದಲ್ಲಿಯೋ ಒಂದಷ್ಟು ಹೊತ್ತು ಕಳೆಯಲು ಅನುಕೂಲವಾಗುತ್ತದೆ. ವೇಗದ ಬದುಕನ್ನು ಅಳವಡಿಸಿಕೊಂಡವರಿಗೆ ಇದು ತಾಳ್ಮೆಯ ಪರೀಕ್ಷೆಯಾದರೂ ನೂಕುನುಗ್ಗಲಿನಿಂದ ಉಂಟಾಗುವ ಗಲಾಟೆಯನ್ನು, ಗಲಿಬಿಲಿಯನ್ನು ತಪ್ಪಿಸುತ್ತದೆ. ಪಂಕ್ತಿ ಸಾಲಿನಲ್ಲಿ ಯಾವತ್ತಿಗೂ ಯಾವ ತಾರತಮ್ಯ ಇರುವುದಿಲ್ಲ, ಇರಲೂಬಾರದು. ಸಾಮಾನ್ಯರಿಗೆ ಪಂಕ್ತಿ ಸಾಲು ಯಾವ ರೀತಿ ಅನ್ವಯವಾಗುತ್ತದೆಯೋ ಅದೇ ರೀತಿ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರಿಗೂ ಅನ್ವಯವಾಗಬೇಕು.

## ಮಮತೆಯ ನೆರಳು– ಸುರ್ಮನ್

ಹೆಸರು ಕೇಳುವುದಕ್ಕೆ ಸಂಗೀತದ ಯಾವುದೋ ಸುಮಧುರ ಸ್ವರದಂತೆ ಕೇಳಿಸುವ ಸುರ್ಮನ್ ಎಷ್ಟೋ ಅನಾಥ ಹಾಗೂ ನಿರ್ಗತಿಕ ಮಕ್ಕಳಿಗೆ ಅವರ ಸ್ವಂತ ಮನೆಯಂತಾಗಿದೆ. ಗುಲಾಬಿ ನಗರ ಜೈಪುರದಲ್ಲಿ ಕಳೆದ 18 ವರ್ಷಗಳಿಂದ ನಡೆಯುತ್ತಿರುವ ಈ ಸಂಸ್ಥೆಯು ಎಷ್ಟೋ ಮುಗ್ಧ ಮಕ್ಕಳ ಮಂದಹಾಸವನ್ನು ಮರಳಿಸಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಾದ ಸುರೇಂದ್ರ ಚತುರ್ವೇದಿ ಹಾಗೂ ಅವರ ಪತ್ನಿ ಮನನ್ ಅವರ ಪ್ರಯತ್ನದಿಂದ 1998ರಲ್ಲಿ ಕೇವಲ ಇಬ್ಬರು ಮಕ್ಕಳೊಂದಿಗೆ ಈ ಬಾಲಾಶ್ರಮವನ್ನು ಪ್ರಾರಂಭಿಸಿದರು. ಈಗ ಸುರ್ಮನ್ ಪರಿವಾರದಲ್ಲಿ 110 ಮಕ್ಕಳು ಮತ್ತು 8 ಮಹಿಳೆಯರು ಇದ್ದಾರೆ.



ಮಕ್ಕಳಿಗಿಂತ ಮೊದಲು ಜೈಪುರದ ಮನನ್ ಅವರ ಕಥೆಯನ್ನು ತಿಳಿದುಕೊಳ್ಳಬೇಕು. ಮನನ್ ಫ್ಯಾಷನ್–ಡಿಸೈನಿಂಗ್‌ನಲ್ಲಿ ಅಗ್ರಸ್ಥಾನವನ್ನು ಪಡೆದ ಕಾರಣ ಅಮೆರಿಕ ಮತ್ತು ಲಂಡನ್‌ನ ಉನ್ನತ ಫ್ಯಾಷನ್ ಸಂಸ್ಥೆಗಳಲ್ಲಿ ಕೆಲಸಕ್ಕಾಗಿ ಅವಕಾಶಗಳು ಲಭಿಸಿತು. ಆದರೆ, ಭಾವುಕ ಮನಸ್ಸಿನ ಮನನ್, ಪತ್ರಕರ್ತರಾದ ಸ್ವಯಂಸೇವಕ ಸುರೇಂದ್ರ ಚತುರ್ವೇದಿ ಅವರನ್ನು ಮದುವೆಯಾದ ನಂತರ ಸಮಾಜ ಮತ್ತು ದೇಶಕ್ಕಾಗಿ ತಮ್ಮ ಪಾತ್ರದ ಬಗ್ಗೆ ಯೋಚಿಸಲಾರಂಭಿಸಿದರು. ಆಗ ಗೌರಿಯೊಂದಿಗೆ ನಡೆದ ಅವರ ಮೊದಲ ಭೇಟಿ ಎಲ್ಲವನ್ನೂ ಬದಲಿಸಿತು. ಗಾಯಗೊಂಡಿದ್ದ ಗೌರಿಯ ಶುಶ್ರೂಷೆ ಮಾಡಿ ಅವಳನ್ನು ಅವಳಿದ್ದ ಸೇವಾಬಸ್ತಿಗೆ ಬಿಡಲು ಹೋದಾಗ, ಭಿಕ್ಷೆಬೇಡುವ ಸಲುವಾಗಿ ಗೌರಿಯನ್ನು ತನ್ನ ತಾಯಿಯೆ ಮಾದಕ ವ್ಯಸನಿಯನ್ನಾಗಿಸಿ ಗಾಯ ಮಾಡಿದ್ದಳು ಎಂಬ ವಿಷಯ ತಿಳಿಯಿತು. ಗೌರಿಯನ್ನು ಅಲ್ಲಿಂದ ಕರೆದುಕೊಂಡು ಬರುವಾಗ ಆ ಬಸ್ತಿಯ ಅವಸ್ಥೆಯನ್ನು ನೋಡಿದ ಮನನ್ ಕೆಲವೇ ಕ್ಷಣಗಳಲ್ಲಿ ತನ್ನ ಜೀವನದ ಉದ್ದೇಶವನ್ನು ಅರ್ಥ ಮಾಡಿಕೊಂಡಿದ್ದರು.

ಲಂಡನ್‌ಗೆ ತೆರಳುವ ತನ್ನ ನಿರ್ಧಾರವನ್ನು ಬದಲಿಸಿ ಈ ನತದೃಷ್ಟ ಮಕ್ಕಳ ಜೀವನವನ್ನು ಪುನರುಜ್ಜೀವನಗೊಳಿಸಲು ಸಿದ್ಧರಾದರು. ಆದರೆ ಈ ದಾರಿ ಅಷ್ಟು ಸುಗಮವಾಗಿರಲಿಲ್ಲ. ಮಕ್ಕಳು ದೊಡ್ಡವರಾದಂತೆಲ್ಲ ಅವರ ಖರ್ಚುಗಳನ್ನು ಭರಿಸಲು ಮನನ್ ಅವರು ಚಿತ್ರಕಲೆ, ಬರವಣಿಗೆ ಮತ್ತು ರಂಗಭೂಮಿಗಳ ಮೂಲಕ ಹಣವನ್ನು ಸಂಪಾದಿಸಿದರು. ದೇಶ ವಿದೇಶಗಳಲ್ಲಿ ಸತತ 24ಗಂಟೆಗಳ ಕಾಲ ತಮ್ಮ ಚಿತ್ರಕಲೆಯ ಪ್ರದರ್ಶನವನ್ನು ಮಾಡಿದರು. 2000ದ ಇಸವಿಯಲ್ಲಿ ಸಂಸ್ಥೆಯ ನೊಂದಣಿಯಾದ ನಂತರ ಸಮಾಜವೂ ಸಹಕಾರಕ್ಕಾಗಿ ಮುಂದೆ ಬಂದಿತು.

ಮೊದಲು ಬಾಲಾಶ್ರಯ ಗೃಹದಿಂದ ಶುರುವಾದ ಈ ಸಂಸ್ಥೆಯು ಕೋಶಿಶ್ ಎಂಬ ಹೆಸರಿನಿಂದ ಪರಿತ್ಯಕ್ತ ಮಹಿಳೆಯರ ಸಹಾಯಕ್ಕಾಗಿ ಮುಂದೆ ಬಂದಿತು. ಈಗ ಆ ಮಹಿಳೆಯರು ಇಲ್ಲಿನ ಮಕ್ಕಳೊಂದಿಗೆ ಸಂಬಂಧವನ್ನು ಬೆಸೆದುಕೊಂಡಿದ್ದಾರೆ. ಈ ಸಂಸ್ಥೆಯು ಬಡ ಹಾಗೂ ಬುದ್ಧಿವಂತ 78 ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ನೀಡುತ್ತಿದೆ. ಹಿಂದೆ ಪಾಂಚಜನ್ಯದ ರಾಜಸ್ಥಾನದ ವರದಿಗಾರರಾಗಿದ್ದ ಸುರೇಂದ್ರ ಅವರು ತಮ್ಮ ಪೂರ್ಣ ಸಮಯವನ್ನು ಸುರ್ಮನ್‌ಗೆ ನೀಡಿದ್ದಾರೆ.

ಯೋಗ, ಸಂಸ್ಕಾರ, ಶಿಸ್ತು, ಮತ್ತು ದೇಶಭಕ್ತಿ ಹೀಗೆ ಸಂಘದ ಈ ಎಲ್ಲಾ ಶಿಕ್ಷಣ ವ್ಯವಸ್ಥೆಯನ್ನು ಸುರ್ಮನ್ ಅಳವಡಿಸಿಕೊಂಡಿದೆ. ಅಧ್ಯಯನದೊಂದಿಗೆ ಚಿತ್ರಕಲೆ, ಸಂಗೀತ, ನಾಟಕ, ಹಾಡುಗಾರಿಕೆ ಮುಂತಾದ ಕಲೆಗಳನ್ನು ಮಕ್ಕಳ ಅಭಿರುಚಿಗೆ ಅನುಸಾರವಾಗಿ ಅವರಿಗೆ ಕಲಿಸಲಾಗುತ್ತದೆ. ಜೈಪುರದ ಚಿತ್ರಕೂಟ ಕ್ರೀಡಾಂಗಣದಲ್ಲಿ ಪ್ರತಿ ವರ್ಷ ನಡೆಯುವ ದಸರಾ ಮೇಳದಲ್ಲಿ ಸಾವಿರಾರು ಜನರ ಮುಂದೆ ಸುರ್ಮನ್‌ನ ಮಕ್ಕಳು ಬಾಲರಾಮಾಯಣವನ್ನು ಹಾಡಿನ ರೂಪದಲ್ಲಿ ಪ್ರಸ್ತುತ ಪಡಿಸುತ್ತಾರೆ. ಸಂಸ್ಥೆಯ ಪತ್ರಿಕೆಯಾದ ಬ್ಲಾಗನವಲ್ಲಿಯಾದಲ್ಲಿ ಮಕ್ಕಳು ಬರೆದ ಕಥೆ ಹಾಗೂ ಕವಿತೆಗಳನ್ನು ನಾವು ಓದಬಹುದು.

ಸಂಪರ್ಕಿಸಿ: ನರೇಂದ್ರ ಶೇಖಾವತ್ (ನಂದ)
ಫೋನ್ ನಂ. – 9829322232

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ಸುಲಕ್ಷಣಾ ಶರ್ಮಾ, ದೀಕ್ಷಿತ್ ನಾಯರ್ ಮಂಡ್ಯ, ಪಂಚಮಿ ಬಾಕಿಲಪದವು

## ದುಬೈನಲ್ಲಿ ಮೊದಲ ಅಂತರರಾಷ್ಟ್ರೀಯ ಸಂಶೋಧನೆ ಮತ್ತು ನಾವೀನ್ಯತೆ ಕೇಂದ್ರ ಸ್ಥಾಪಿಸಲಿದೆ ಐಐಟಿ ಮದ್ರಾಸ್

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮದ್ರಾಸ್ (ಐಐಟಿ ಮದ್ರಾಸ್) ದುಬೈನಲ್ಲಿ ತನ್ನ ಮೊದಲ ಅಂತರರಾಷ್ಟ್ರೀಯ ಸಂಶೋಧನೆ ಮತ್ತು ನಾವೀನ್ಯತೆ ಕೇಂದ್ರವನ್ನು ಸ್ಥಾಪಿಸಲು ಸಜ್ಜಾಗಿದೆ. ಈ ಕೇಂದ್ರ ಸಂಶೋಧನೆ, ನಾವೀನ್ಯತೆ ಮತ್ತು ಉದ್ಯಮಶೀಲತೆಯ ಮೇಲೆ ಕೇಂದ್ರೀಕರಿಸಲಿದೆ. 2025ರ ಆರಂಭದಲ್ಲಿ ಕೇಂದ್ರವನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ಐಐಟಿ ಮದ್ರಾಸ್ ಗ್ಲೋಬಲ್ ದುಬೈ ಸೆಂಟರ್ ಹೆಸರಿನ ಈ ಕೇಂದ್ರವು ಕೃತಕ ಬುದ್ಧಿಮತ್ತೆ (AI), ಡೇಟಾ ಸೈನ್ಸ್, ರೊಬೊಟಿಕ್ಸ್ ಮತ್ತು ಸುಸ್ಥಿರ ಶಕ್ತಿಯಂತಹ ಮುಂದುವರಿದ ಕ್ಷೇತ್ರಗಳಲ್ಲಿ ಪರಿಣತಿಯನ್ನು ಹೊಂದಿದ್ದು, ಭಾರತದ ಉದ್ಯಮಶೀಲ ಪರಿಸರ ವ್ಯವಸ್ಥೆಗೆ ಪ್ರಮುಖ ಲಿಂಕ್ ಅನ್ನು ರಚಿಸುತ್ತದೆ. ಐಐಟಿ ಮದ್ರಾಸ್ ಮತ್ತು ದುಬೈ ಆರ್ಥಿಕ ಹಾಗೂ ಪ್ರವಾಸೋದ್ಯಮ ಇಲಾಖೆ (ಡಿಇಟಿ) ನಡುವಿನ ಒಪ್ಪಂದದ ಮೂಲಕ ಈ ಕೇಂದ್ರವು ಸ್ಥಾಪನೆಯಾಗುತ್ತಿದೆ. ಪ್ರಪಂಚದ ಅತಿದೊಡ್ಡ ತಂತ್ರಜ್ಞಾನ ಪ್ರದರ್ಶನಗಳಲ್ಲಿ ಒಂದಾದ GITEX ಗ್ಲೋಬಲ್ 2024ರ ಸಂದರ್ಭದಲ್ಲಿ, ದುಬೈ ಆರ್ಥಿಕ ಅಭಿವೃದ್ಧಿ ನಿಗಮದ (DEDC) ಸಿಇಒ ಹಾದಿ ಬದ್ರಿ ಮತ್ತು IIT ಮದ್ರಾಸ್‌ನ ಗ್ಲೋಬಲ್ ಎಂಗೇಜ್‌ಮೆಂಟ್ ಡೀನ್ ಪ್ರೊ. ರಘುನಾಥನ್ ರೆಂಗಸ್ವಾಮಿ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

## ಪಿಎಂ ಇಂಟರ್ನ್‌ಶಿಪ್: ಸುಮಾರು 1 ಲಕ್ಷ ಮಂದಿಗೆ ಅವಕಾಶ

ಅಕ್ಟೋಬರ್ 12 ರಿಂದ ಅರ್ಜಿದಾರರ ನೋಂದಣಿ ಪ್ರಾರಂಭವಾಗುವ ಮೊದಲೇ ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆಗಾಗಿ ಪೋರ್ಟಲ್‌ನಲ್ಲಿ 193 ಕಂಪನಿಗಳು ಇದುವರೆಗೆ 90,800 ಕ್ಕೂ ಹೆಚ್ಚು ಇಂಟರ್ನ್‌ಶಿಪ್ ಅವಕಾಶಗಳನ್ನು ನೀಡಿವೆ ಎಂದು ಮೂಲಗಳು ತಿಳಿಸಿವೆ. ಜುಬಿಲಂಟ್ ಫುಡ್‌ವರ್ಕ್ಸ್, ಮಾರುತಿ ಸುಜುಕಿ ಇಂಡಿಯಾ, ಐಷರ್ ಮೋಟಾರ್, ಲಾರ್ಸನ್ ಮತ್ತು ಟೂಬ್ರೊ ಲಿಮಿಟೆಡ್, ಮುತ್ತೂಟ್ ಫೈನಾನ್ಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಸೇರಿದಂತೆ 193 ಕಂಪನಿಗಳು ಅವಕಾಶಗಳನ್ನು ನೀಡಿವೆ. ಅವಕಾಶಗಳನ್ನು ಪೋಸ್ಟ್ ಮಾಡಲು ಕಂಪನಿಗಳಿಗೆ ಅಕ್ಟೋಬರ್ 3 ರಂದು ಪೋರ್ಟಲ್ ತೆರೆಯಲಾಗಿದೆ. ಯೋಜನೆಯ ಪ್ರಾಯೋಗಿಕ ಯೋಜನೆಯಡಿ, ಸುಮಾರು ರೂ. 800 ಕೋಟಿ ವೆಚ್ಚವಾಗಲಿದೆ, ಇಂಟರ್ನ್‌ಶಿಪ್‌ಗಳು ಡಿಸೆಂಬರ್ 2 ರಂದು ಪ್ರಾರಂಭವಾಗುತ್ತವೆ. ಇದು ಮಾರ್ಚ್ 2025ಕ್ಕೆ ಕೊನೆಗೊಳ್ಳುವ ಪ್ರಸಕ್ತ ಹಣಕಾಸು ವರ್ಷದಲ್ಲಿ 1.25 ಲಕ್ಷ ಅಭ್ಯರ್ಥಿಗಳನ್ನು ಒಳಗೊಳ್ಳುವ ನಿರೀಕ್ಷೆಯಿದೆ.

## ಮೊದಲ ಬಾರಿಗೆ ಭಾರತದ ಭೂಪ್ರದೇಶದಿಂದ ಕೈಲಾಸ ವೀಕ್ಷಣೆ

ಯಾತ್ರಾರ್ಥಿಗಳು ಭಾರತದ ಭೂಪ್ರದೇಶದೊಳಗಿನಿಂದ ಮೊದಲ ಬಾರಿಗೆ ಶಿವನ ವಾಸಸ್ಥಾನವೆಂದು ನಂಬಲಾದ ಪವಿತ್ರ ಕೈಲಾಸ

# ಸಾಲುದ್ದದ ಸುದ್ದಿಗಳು



ಶಿಖರವನ್ನು ವೀಕ್ಷಣೆ ಮಾಡಿದರು. ಉತ್ತರಾಖಂಡದ ಪಿಥೋರಗಢ್ ಜಿಲ್ಲೆಯ ವ್ಯಾಸ್ ಕಣಿವೆಯಲ್ಲಿರುವ ಹಳೆಯ ಲಿಪುಲೇಖ್ ಪಾಸ್ ಮೂಲಕ ಕೈಲಾಸ ವೀಕ್ಷಣೆ ಮಾಡಲಾಗಿದೆ. ಈ ಪ್ರದೇಶ ಅಪಾರ ಧಾರ್ಮಿಕ ಮಹತ್ವವನ್ನು ಹೊಂದಿದೆ. ಇದಕ್ಕೂ ಮೊದಲು, ಯಾತ್ರಿಕರು ಕೈಲಾಸದ ವೀಕ್ಷಣೆಗಾಗಿ ಟಿಬೆಟ್ ಸ್ವಾಯತ್ತ ಪ್ರದೇಶಕ್ಕೆ ಪ್ರಯಾಣಿಸಬೇಕಾಗಿತ್ತು. ಆದರೆ ಮೊದಲ ಬಾರಿಗೆ ಭಾರತದ ಪ್ರದೇಶದ ಒಳಗಿನಿಂದ ಕೈಲಾಸ ಶಿಖರವನ್ನು ವೀಕ್ಷಿಸುವ ಅವಕಾಶ ಶಿವಭಕ್ತರಿಗೆ ಒಲಿದಿದೆ.

## ಲೆಬನಾನ್‌ಗೆ 11 ಟನ್ ವೈದ್ಯಕೀಯ ನೆರವು ರವಾನಿಸಿದ ಭಾರತ




ಹೆಚ್ಚುತ್ತಿರುವ ಉದ್ವಿಗ್ನತೆ ಮತ್ತು ದಕ್ಷಿಣ ಲೆಬನಾನ್‌ನಲ್ಲಿ ನಡೆಯುತ್ತಿರುವ ಸಂಘರ್ಷದ ಮಧ್ಯೆ ಬಿಕ್ಕಟ್ಟು ಪೀಡಿತ ರಾಷ್ಟ್ರವನ್ನು ಬೆಂಬಲಿಸುವ ಮಾನವೀಯ ಪ್ರಯತ್ನದ ಭಾಗವಾಗಿ ಭಾರತವು ಲೆಬನಾನ್‌ಗೆ 11 ಟನ್‌ಗಳ ವೈದ್ಯಕೀಯ ಸಾಮಗ್ರಿಗಳ ಮೊದಲ ಕಂತನ್ನು ರವಾನಿಸಿದೆ. ಒಟ್ಟು 33 ಟನ್ ವೈದ್ಯಕೀಯ ಸಾಮಗ್ರಿಗಳನ್ನು ಕಳುಹಿಸಲಾಗುತ್ತಿದೆ. ರವಾನೆಯು ಹೃದಯರಕ್ತನಾಳದ ಔಷಧಿಗಳು, NSAID ಗಳು (ಸ್ಟಿರಾಯ್ಡ್ ಅಲ್ಲದ ಔಷಧಗಳು), ಪ್ರತಿಜೀವಕಗಳು ಮತ್ತು ಅರಿವಳಿಕೆಗಳನ್ನು ಒಳಗೊಂಡಂತೆ ವ್ಯಾಪಕ ಶ್ರೇಣಿಯ ಔಷಧೀಯ ಉತ್ಪನ್ನಗಳನ್ನು ಒಳಗೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಅಧಿಕೃತ ವಕ್ತಾರರಾದ ರಣಧೀರ್ ಜೈಸ್ವಾಲ್ ತಿಳಿಸಿದರು.

## ಬಾಲ್ಯ ವಿವಾಹ ನಿಷೇಧ ಎಲ್ಲಾ ಧರ್ಮಕ್ಕೆ ಅನ್ವಯ: ಸುಪ್ರೀಮ್

ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ಯಾವುದೇ ಧರ್ಮದ ವೈಯಕ್ತಿಕ ಕಾನೂನಿನ ಅಡಿಯ ಸಂಪ್ರದಾಯಗಳನ್ನು ಮುಂದಿಟ್ಟುಕೊಂಡು ಚಿವುಟಿ ಹಾಕಲು ಆಗದು ಎಂದು ಮಹತ್ವದ ಆದೇಶ ಪ್ರಕಟಿಸಿರುವ ಸುಪ್ರೀಂ ಕೋರ್ಟ್, 'ಚಿಕ್ಕ ಮಕ್ಕಳಿಗೆ ವಿವಾಹ ಮಾಡಿದರೆ ಅವರು ತಮ್ಮ ಜೀವನ ಸಂಗಾತಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮೊಟಕು ಗೊಳಿಸಿದಂತೆ' ಎಂದಿದೆ. ತನ್ಮೂಲಕ ಬಾಲ್ಯ ವಿವಾಹ ನಿಷೇಧ ಕಾಯ್ದೆ ಎಲ್ಲಾ ಧರ್ಮಗಳಿಗೂ ಅನ್ವಯಿಸುತ್ತದೆ ಎಂದು ಸ್ಪಷ್ಟವಾಗಿ ಹೇಳಿದೆ. ದೇಶದಲ್ಲಿ ಏಕರೂಪದ ನಾಗರಿಕ ಸಂಹಿತೆ ಜಾರಿಗೊಳಿಸುವ ಕೇಂದ್ರ ಸರ್ಕಾರದ ಪ್ರಯತ್ನಕ್ಕೆ ಪೂರಕವಾಗಿ ಈ ಆದೇಶ ಹೊರಬಿದ್ದಿದೆ. ಬಾಲ್ಯ ವಿವಾಹ ತಡೆ ಕಾನೂನಿನ ಪರಿಣಾಮಕಾರಿ ಜಾರಿ ಕೋರಿ ಸ್ವಯಂಸೇವಾ ಸಂಸ್ಥೆಯೊಂದು ಅರ್ಜಿ ಹಾಕಿತ್ತು. ಮುಖ್ಯ ನ್ಯಾಯಾಧೀಶ ನ್ಯಾ| ಡಿ.ವೈ. ಚಂದ್ರಚೂಡ್, ನ್ಯಾ| ಜೆ.ಬಿ.ಪರ್ದಿವಾಲಾ ಮತ್ತು ನ್ಯಾ| ಮನೋಜ್ ಮಿಶ್ರಾ ಅವರ ಪೀಠ ಇದರ ವಿಚಾರಣೆ ನಡೆಸಿತು. ಬಾಲ್ಯ ವಿವಾಹ ತಡೆವ ಹೊಣೆಯನ್ನು ಡಿ.ಸಿ.ಗಳು, ಎಸ್‌ಪಿಗಳು ಕೂಡಾ ಹೊರಬೇಕು. ಬಾಲ್ಯ ವಿವಾಹ ತಡೆಗೆ ಪ್ರತ್ಯೇಕ ನುರಿತ ಪೊಲೀಸ್ ಘಟಕ ಸ್ಥಾಪಿಸಬೇಕು ಎಂದೂ ಪೀಠ ತಿಳಿಸಿದೆ.

## ಉಡಾನ್ ಅಡಿಯಲ್ಲಿ 71 ವಿಮಾನ ನಿಲ್ದಾಣಗಳು ಕಾರ್ಯಗತ




8 ವರ್ಷಗಳ ಹಿಂದೆ ಪರಿಚಯಿಸಲಾದ ಪ್ರಾದೇಶಿಕ ವಾಯು ಸಂಪರ್ಕ ಯೋಜನೆ – ಉಡಾನ್ ಅಡಿಯಲ್ಲಿ 601 ಮಾರ್ಗಗಳು ಮತ್ತು 71 ವಿಮಾನ ನಿಲ್ದಾಣಗಳನ್ನು ಕಾರ್ಯಗತಗೊಳಿಸಲಾಗಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ. 71 ವಿಮಾನ ನಿಲ್ದಾಣಗಳು, 13 ಹೆಲಿಪೋರ್ಟ್‌ಗಳು ಮತ್ತು 2 ವಾಟರ್ ಏರೋಡ್ರೋಮ್‌ಗಳನ್ನು ಒಳಗೊಂಡಿರುವ ಒಟ್ಟು 86 ಏರೋಡ್ರೋಮ್‌ಗಳನ್ನು ಕಾರ್ಯಗತಗೊಳಿಸಲಾಗಿದೆ. ಇದು 2.8 ಲಕ್ಷಕ್ಕೂ ಹೆಚ್ಚು ವಿಮಾನಗಳಲ್ಲಿ 1.44 ಕೋಟಿ ಪ್ರಯಾಣಿಕರ ಪ್ರಯಾಣವನ್ನು ಸುಗಮಗೊಳಿಸುತ್ತದೆ. ದೇಶದಲ್ಲಿ ಕಾರ್ಯಾಚರಿಸುತ್ತಿರುವ ವಿಮಾನ ನಿಲ್ದಾಣಗಳ ಸಂಖ್ಯೆಯು 2014ರಲ್ಲಿ 74 ರಿಂದ 2024ರಲ್ಲಿ 157ಕ್ಕೆ ದ್ವಿಗುಣಗೊಂಡಿದೆ. 2047ರ ವೇಳೆಗೆ ಸಂಖ್ಯೆಯನ್ನು 350–400ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಿದೆ.

# 'ಅಮ್ಮ' ಎಂಬ ಅಗಾಧ ಶಕ್ತಿ ಮತ್ತು ಸಾಧಕ ಮಕ್ಕಳು!

ಆ ತಾಯಿ ಹೂ ಮಳೆಯಂತೆ ನಗುತ್ತಿದ್ದಾಳೆ. ಆಕೆಯ ಕಣ್ಣುಗಳಲ್ಲಿ ಸಾವಿರ ವೋಲ್ಟೇಜಿನ ಬೆಳಕು. ತನ್ನ ಇಬ್ಬರು ಮಕ್ಕಳ ಅದ್ಭುತ ಸಾಧನೆಗೆ ಅವಳು ಹಿರಿಹಿರಿ ಹಿಗ್ಗಿದ್ದಾಳೆ. ಆ ಮಕ್ಕಳಿಬ್ಬರೂ ಕೈಯಲ್ಲಿ ತಾವು ಗೆದ್ದ ಕಪ್ ಹಿಡಿದು ತುಂಬು ಸಂಭ್ರಮದಲ್ಲಿದ್ದಾರೆ. ಅವರಿಗೆ 'ಭಾರತ' ದ ಬಾವುಟ ಹೊದಿಸಲಾಗಿದೆ.

ಮಧ್ಯದಲ್ಲಿ ತಾಯಿ ಇದ್ದರೆ ಅವಳ ಆ ಕಡೆ ಬದಿಗೆ ಮಗ ಮತ್ತು ಈ ಕಡೆ ಬದಿಗೆ ಮಗಳು ನಿಂತಿದ್ದಾಳೆ. ಅದೊಂದು ಅಪರೂಪದ ಮತ್ತು ಬೆಲೆ ಕಟ್ಟಲಾಗದ ಕ್ಷಣ. ಇತ್ತೀಚೆಗೆ ಹೀಗೊಂದು ಫೋಟೋ ಮತ್ತು ವಿಡಿಯೋ ಎಲ್ಲೆಡೆ ಹರಿದಾಡಿತು. ನೋಡುಗರು ಆ ತಾಯಿಯ ನಿಷ್ಕಲ್ಮಶ ನಗು ಮತ್ತು ಮಕ್ಕಳ ಅಸಾಧಾರಣ ಸಾಧನೆಗೆ ಸಂತಸಪಟ್ಟರು. ಅಷ್ಟಕ್ಕೂ ಆ ತಾಯಿಯ ಹೆಸರು ನಾಗಲಕ್ಷ್ಮಿ. ಆ ಸಾಧಕ ಮಕ್ಕಳ ಹೆಸರು ಪ್ರಜ್ಞಾನಂದ ಮತ್ತು ವೈಶಾಲಿ. ಅವರಿಬ್ಬರು ವಿಶ್ವಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ಗೆದ್ದು ಚಾಂಪಿಯನ್ ಗಳಾಗಿ ಹೊರಹೊಮ್ಮುವ ಮೂಲಕ ದೇಶಕ್ಕೆ ಹೆಸರು ತಂದವರು. ಭಾರತದ ಕೀರ್ತಿಯನ್ನು ಹೆಚ್ಚಿಸಿದವರು.

ಹೌದು, ಪ್ರಜ್ಞಾನಂದ ಮತ್ತು ವೈಶಾಲಿ ಚೆಸ್ ಆಟದಲ್ಲಿ ಪರಿಣತರು. ಒಡಹುಟ್ಟಿರುವ ಇವರಿಬ್ಬರು ಚಿಕ್ಕ ವಯಸ್ಸಿನಲ್ಲಿಯೇ ಮಹತ್ತರವಾದ ಸಾಧನೆಯನ್ನು ಮಾಡಿದ್ದಾರೆ. ಹಾಗೇ ಇವರಿಬ್ಬರು ಚೆಸ್ ಇತಿಹಾಸದಲ್ಲಿ ಮೊದಲ ಗ್ರ್ಯಾಂಡ್ ಮಾಸ್ಟರ್ ಗೌರವಕ್ಕೆ ಪಾತ್ರರಾದ ಒಡಹುಟ್ಟಿದ ಜೋಡಿ ಎನಿಸಿಕೊಂಡಿದ್ದಾರೆ.

**ಒಡಹುಟ್ಟಿದ ಜೋಡಿಯ ಅದ್ಭುತ ಸಾಧನೆ:** ಪ್ರಜ್ಞಾನಂದ ಮತ್ತು ವೈಶಾಲಿ ರಮೇಶ್ ಬಾಬು ಮತ್ತು ನಾಗಲಕ್ಷ್ಮೀ ದಂಪತಿಗಳ ಮಕ್ಕಳು. ತಮಿಳುನಾಡಿನ ಚೆನ್ನೈನಲ್ಲಿ ವಾಸ. ಮಧ್ಯಮ ವರ್ಗದ ಕುಟುಂಬ. ಸದ್ಯಕ್ಕೆ ಪ್ರಜ್ಞಾನಂದನಿಗೆ ಹತ್ತೊಂಬತ್ತು ವರ್ಷ ಮತ್ತು ವೈಶಾಲಿಗೆ ಇಪ್ಪತ್ತೂರು ವರ್ಷ. ಇಬ್ಬರೂ ಬಾಲ್ಯದಿಂದಲೇ ಚೆಸ್ ಆಟದತ್ತ ಆಸಕ್ತಿ ತೋರಿದವರು. ಮುಂದೆ ದೇಶ ಮತ್ತು ವಿದೇಶಗಳಲ್ಲಿ ನಡೆದ ಚೆಸ್




ಚಾಂಪಿಯನ್ಶಿಪ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಯಶಸ್ಸು ಕಂಡವರು. ಚಿಕ್ಕ ವಯಸ್ಸಿನಲ್ಲಿಯೇ ಚೆಸ್ ಆಟದಲ್ಲಿ ಯಾರೂ ಮಾಡಲಾಗದ ಸಾಧನೆಗಳನ್ನು ಮಾಡಿದವರು. ವಿಶ್ವಮಟ್ಟದಲ್ಲಿ ಗುರುತಿಸಿಕೊಂಡವರು. ಪ್ರಜ್ಞಾನಂದ ತನ್ನ ಹನ್ನೆರಡನೆ ವಯಸ್ಸಿನಲ್ಲಿಯೇ 'ವರ್ಲ್ಡ್ ಜೂನಿಯರ್ ಚೆಸ್ ಚಾಂಪಿಯನ್ಶಿಪ್' ಅನ್ನಿಸಿಕೊಂಡವನು. ಇನ್ನು 2018 ರಿಂದ ನಿರಂತರವಾಗಿ ಚೆಸ್ ಆಟದಲ್ಲಿ ಮಾಸ್ಟರ್ ಆಗಿ ಸಾಧಿಸುತ್ತಾ ಬಂದವನು. ಈ ವರ್ಷ ಇನ್ನೂ ಮುಂದೆ ಹೋಗಿ ವಿಶ್ವಮಟ್ಟದಲ್ಲಿ ಚೆಸ್ ಫೆಡರೇಷನ್ ಆಯೋಜಿಸುವ ಚಾಂಪಿಯನ್ಶಿಪ್ ಸ್ಪರ್ಧೆಯಲ್ಲಿ ಹನ್ನೆರಡನೇ ರಾಂಕ್ ಪಡೆದು ಅಮೋಘವಾದ ಸಾಧನೆಯನ್ನು ಮಾಡಿದ್ದಾನೆ. ಅವನ ಸಾಧನೆಗೆ ಇಡೀ ದೇಶ ಶ್ಲಾಘನೆಯನ್ನು ವ್ಯಕ್ತಪಡಿಸಿದೆ. ಅವನ ಅಸಾಮಾನ್ಯ ಸಾಧನೆಗೆ ಭಾರತ ಸರ್ಕಾರ 2022ನೇ ಇಸವಿಯಲ್ಲಿಯೇ ಅರ್ಜುನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇನ್ನು ಪ್ರಜ್ಞಾನಂದನ ಸಹೋದರಿ ವೈಶಾಲಿ ಅವರು ಕೂಡ ಚೆಸ್ ಆಟದಲ್ಲಿ ಗ್ರಾಂಡ್ ಮಾಸ್ಟರ್. ಬಾಲ್ಯದಲ್ಲೇ 'ಗರ್ಲ್ಸ್ ವರ್ಲ್ಡ್ ಯೂತ್ ಚೆಸ್ ಚಾಂಪಿಯನ್ಶಿಪ್' ಅನ್ನು ತಮ್ಮದಾಗಿಸಿಕೊಂಡವರು. 2012ನೇ ಇಸವಿಯಿಂದ ಸತತವಾಗಿ ಇಲ್ಲಿಯವರೆಗೂ ಚಾಂಪಿಯನ್ಶಿಪ್ ಆಗಿಯೇ ಉಳಿದುಕೊಂಡಿದ್ದಾರೆ. ದೇಶದ ಹಿರಿಮೆಯನ್ನು ಹೆಚ್ಚಿಸುತ್ತಿದ್ದಾರೆ. ಈ ವರ್ಷದ ಸೆಪ್ಟೆಂಬರ್ ನಲ್ಲಿ ನಡೆದ ಇಂಟರ್ನ್ಯಾಷನಲ್ ಚೆಸ್ ಫೆಡರೇಷನ್ ನ ಚಾಂಪಿಯನ್ಶಿಪ್ ಸ್ಪರ್ಧೆಯಲ್ಲಿಯೂ ಗೆದ್ದಿದ್ದಾರೆ. ವೈಶಾಲಿ ಅವರ ಸಾಧನೆಗೂ ಭಾರತ ಸರ್ಕಾರ ಈ ವರ್ಷ (2024) ಅರ್ಜುನ ಪ್ರಶಸ್ತಿಯನ್ನು ನೀಡಿದೆ. ಸಡಗರದ ವಿಷಯವೆಂದರೆ ಈ ವರ್ಷ ಒಡಹುಟ್ಟಿದ ಇಬ್ಬರೂ ಒಟ್ಟಿಗೆ ಚಾಂಪಿಯನ್‌ಗಳಾಗಿ ಹೆತ್ತ ತಾಯಿ ಮತ್ತು ಹೊತ್ತ ನಾಡಿಗೆ ಹೆಸರು ತಂದಿದ್ದಾರೆ.

ಒಂದೇ ಮನೆಯಲ್ಲಿ ಇಬ್ಬರು ಸಾಧಕರು ಹುಟ್ಟುವುದು ಅಪರೂಪ. ಅದರಲ್ಲೂ ಇಬ್ಬರೂ ಒಂದೇ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿ ದೊಡ್ಡಮಟ್ಟದಲ್ಲಿ ಬೆಳೆಯುವುದು ಅಚ್ಚರಿಯ ಸಂಗತಿ. ಚೆಸ್ ಆಟಕ್ಕೆ ಭವ್ಯ ಭವಿಷ್ಯವಿದೆ ಎಂದು ತೋರಿಸಿಕೊಟ್ಟಿರುವ ಮಕ್ಕಳಿಗೆ ಚಪ್ಪಾಳೆ. ಇಂದು ಆ ಆಟದ ಮೂಲಕವೇ ಭಾರತವನ್ನು ಪ್ರಶಂಸೆಗೆ ಒಳಪಡಿಸಿರುವ ಸಾಧಕ ಮಕ್ಕಳಿಗೆ ಅಭಿಮಾನದ ನಮಸ್ಕಾರ. ಅಂದಹಾಗೆ ಆ ಮಕ್ಕಳಿಬ್ಬರ ಸಾಧನೆಯ ಹಿಂದಿರುವುದು 'ನಾಗಲಕ್ಷ್ಮಿ' ಎಂಬ ಅ–ಸಾಮಾನ್ಯ ಗೃಹಿಣಿ. ಆ ನಿಸ್ವಾರ್ಥ ತಾಯಿಯ ಹರಕೆ–ಹಾರೈಕೆ ಮಕ್ಕಳನ್ನು ಆ ಮಟ್ಟಕ್ಕೆ ಕರೆದೊಯ್ದಿದೆ. 'ಅಮ್ಮ' ಎಂಬ ಅಗಾಧ ಶಕ್ತಿ ಜತೆಗಿದ್ದರೆ ಎಲ್ಲವೂ ಸಾಧ್ಯ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಪ್ರಜ್ಞಾನಂದ ಮತ್ತು ವೈಶಾಲಿ ಅವರ ಸಾಧನೆ ಮುಗಿಲು ಮುಟ್ಟಲಿ. ಅವರ ಸಾಧನೆಯನ್ನು ದೇಶ ಸಂಭ್ರಮಿಸುತ್ತಲೇ ಇರಲಿ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th OCTOBER 2024

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 01-11-2024



ಸಹಿಸಿಕೊಂಡು ಸಹಾಯ ಮಾಡುತ್ತಾರೋ, ಹಾಗೆಯೇ ಸಮಾಜದಲ್ಲಿನ ಎಲ್ಲರೂ ತಮ್ಮವರು ಎಂಬ ದೃಷ್ಟಿಯನ್ನು ಹೊಂದಿ, ಅವಶ್ಯಕತೆಗಳ ಬಗ್ಗೆ ಚರ್ಚೆಯನ್ನು ಮಾಡಬೇಕಾಗಿದೆ.

ಸಮಾಜದಲ್ಲಿ ಅನೇಕ ಜಾತಿ ವರ್ಗಗಳ ಮುನ್ನಡೆಸುವ ಅವರವರ ರಚನೆಗಳು, ಸಂಸ್ಥೆಗಳೂ ಇವೆ. ಅವರವರ ಜಾತಿ, ವರ್ಗದ ಉನ್ನತಿಗಾಗಿ, ಸುಧಾರಣೆಗಾಗಿ ಮತ್ತು ಅವರ ಹಿತಪ್ರಬೋಧನೆಯ ವಿಚಾರ ಈ ರಚನೆಗಳ ನೇತೃತ್ವದ ಮೂಲಕ ಮಾಡಲಾಗುತ್ತದೆ. ಜಾತಿ ಸಮುದಾಯದ ಮುಖಂಡರು ಒಂದೆಡೆ ಕುಳಿತು ಎರಡು ವಿಷಯಗಳ ಬಗ್ಗೆ ನಿತ್ಯ ಚರ್ಚೆ ನಡೆಸಿದರೆ ಸಮಾಜದಲ್ಲಿ ಎಲ್ಲೆಲ್ಲೂ ಸಾಮರಸ್ಯದ ವಾತಾವರಣ ನಿರ್ಮಾಣವಾಗುತ್ತದೆ. ಸಮಾಜವನ್ನು ವಿಭಜಿಸುವ ಯಾವುದೇ ಕುತಂತ್ರ ಯಶಸ್ವಿಯಾಗುವುದಿಲ್ಲ. ಮೊದಲ ವಿಷಯವೇನೆಂದರೆ ನಾವೆಲ್ಲರೂ ಬೇರೆ ಬೇರೆ ಜಾತಿ ವರ್ಗದವರು ಒಟ್ಟು ಸೇರಿ ದೇಶ ಹಿತದ ಹಾಗೂ ನಮ್ಮ ಕಾರ್ಯಕ್ಷೇತ್ರದ ಸಂಪೂರ್ಣ ಸಮಾಜದ ಹಿತಕ್ಕಾಗಿ ಯಾವ ಸಂಗತಿಗಳನ್ನು ಮಾಡಬಹುದು? ಎಂಬುದನ್ನು ಚರ್ಚಿಸುವುದು. ಎರಡನೆಯ ವಿಷಯವೇನೆಂದರೆ, ನಮ್ಮಲ್ಲಿರುವ ದುರ್ಬಲ ಜಾತಿಗಳು ಅಥವಾ ವರ್ಗಗಳ ಕಲ್ಯಾಣಕ್ಕಾಗಿ ನಾವೆಲ್ಲರೂ ಒಟ್ಟಾಗಿ ಏನು ಮಾಡಬಹುದು? ಎಂಬುದರ ಕುರಿತು ಯೋಜಿಸುವ ಮೂಲಕ ಅವರು ಫಲಿತಾಂಶಗಳಿಗೆ ಕೊಂಡೊಯ್ಯಬೇಕು.  ಇಂತಹ ಚಿಂತನೆಗಳು ಮತ್ತು ಕಾರ್ಯಗಳು ನಿರಂತರವಾಗಿ ನಡೆದರೆ, ಸಮಾಜವು ಆರೋಗ್ಯಕರವಾಗಿರುತ್ತದೆ ಮತ್ತು ಸಾಮರಸ್ಯದ ವಾತಾವರಣವೂ ನಿರ್ಮಾಣವಾಗುತ್ತದೆ.

**ಪರಿಸರ:** ಸುತ್ತಮುತ್ತಲಿನ ವಾತಾವರಣದಲ್ಲಿ ಒಂದು ವಿಶ್ವವ್ಯಾಪಿ ಸಮಸ್ಯೆಯು ಮುಂಬರುವ ವರ್ಷಗಳಲ್ಲಿ ನಮ್ಮ ದೇಶದಲ್ಲೂ ಎದುರಿಸುತ್ತಿರುವಂಥದ್ದು ಎಂದರೆ ಪರಿಸರದ ದುಃಸ್ಥಿತಿ. ಋತುಚಕ್ರವು ಅನಿಯಮಿತವಾಗಿ ಇನ್ನಷ್ಟು ತೀವ್ರಗೊಂಡಿದೆ. ಉಪಭೋಗವಾದಿ ಮತ್ತು ಮೂಲಭೂತವಾದಿ ಅಪೂರ್ಣ ಸೈದ್ಧಾಂತಿಕ ತಳಹದಿಯ ಮೇಲೆ ಚಲಿಸುವ ಮಾನವನ ತಥಾಕಥಿತ ವಿಕಾಸದ ಯಾತ್ರೆ ಆದಷ್ಟು ಬೇಗ ಮಾನವರ ಸಹಿತ ಸಂಪೂರ್ಣ ಸೃಷ್ಟಿಯ ವಿನಾಶದ ಯಾತ್ರೆಯು ರೂಪುಗೊಂಡಿದೆ. ನಮ್ಮ ಭಾರತದ ಪರಂಪರೆಯಿಂದ ಪಡೆದ ಸಂಪೂರ್ಣ, ಸಮಗ್ರ ಮತ್ತು ಏಕಾತ್ಮ ದೃಷ್ಟಿಯ ಆಧಾರದ ಮೇಲೆ ನಾವು ನಮ್ಮ ವಿಕಾಸದ ಪಥವನ್ನು ನಿರ್ಮಿಸಬೇಕಾಗಿತ್ತು, ಆದರೆ ನಾವು ಹಾಗೆ ಮಾಡಲಿಲ್ಲ. ಇದೀಗ ಈ ರೀತಿಯ ಆಲೋಚನೆಗಳು ಸ್ವಲ್ಪ ಕೇಳಿಬರುತ್ತಿವೆ, ಆದರೆ ಮೇಲ್ನೋಟಕ್ಕೆ ಕೆಲವು ವಿಷಯಗಳನ್ನು ಸ್ವೀಕರಿಸಿದ್ದೇವೆ, ಕೆಲವು ವಿಷಯಗಳ ಪರಿವರ್ತನೆಯಾಗಿದೆ. ಇದಕ್ಕಿಂತ ಹೆಚ್ಚಿನ ಕೆಲಸ ನಡೆದಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ವಿನಾಶಕ್ಕೆ ಕಾರಣವಾಗುವ ಅಭಿವೃದ್ಧಿಯ ಅಪೂರ್ಣ ಮಾರ್ಗವನ್ನು ಕುರುಡಾಗಿ ಅನುಸರಿಸುವುದರ ಪರಿಣಾಮವನ್ನು ನಾವೂ ಅನುಭವಿಸುತ್ತಿದ್ದೇವೆ. ನೀರಿನ ಕನಿಷ್ಠ ಅವಶ್ಯಕ ಬಳಕೆ ಮತ್ತು ಮಳೆ ನೀರಿನ ಕೊಯ್ಲು, ಪ್ಲಾಸ್ಟಿಕ್ ವಸ್ತುಗಳನ್ನು ಬಳಸದಿರುವುದು, ಋಟಿರಂಟಜ ಗ್ಗಜ ಕಟಭೆಣುಭಿ ಎಂದು ಕರೆಯುವ ಪ್ಲಾಸ್ಟಿಕ್‌ನ ಬಳಕೆಯನ್ನು ಸಂಪೂರ್ಣವಾಗಿ ಕೈಬಿಡುವುದು. ಮನೆಯ ಹೊರಗೆ ಹೆಚ್ಚು ಹಸಿರನ್ನು ಬೆಳೆಯುವಂತೆ ನೋಡಿಕೊಳ್ಳುವುದು, ಗಿಡಗಳನ್ನು ನೆಡುವುದು, ನಮ್ಮ ಕಾಡುಗಳಲ್ಲಿ ಮತ್ತು ಪರಂಪರಾನುಗತವಾಗಿ ಸ್ಥಳೀಯವಾಗಿ ಬೆಳೆಯುವ ಮರಗಳ ಗಿಡವನ್ನು ಎಲ್ಲೆಡೆ ನೆಡುವುದರ ಕುರಿತು ಗಮನಹರಿಸಬೇಕು.

**ಸಂಸ್ಕಾರ ಜಾಗರಣ:** ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮೌಲ್ಯಯುತ ಶಿಕ್ಷಣ ವ್ಯವಸ್ಥೆ ಹಾಗೂ ಅನುಗುಣವಾದ ಪಠ್ಯಕ್ರಮ ರೂಪಿಸುವ ಪ್ರಯತ್ನ ನಡೆಯುತ್ತಿದೆ. ಆದರೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ವಿದ್ಯಾರ್ಥಿಗಳ ಎದುರು ಶಿಕ್ಷಕರೇ ಉದಾಹರಣೆಯಾಗಿ ನಿಲ್ಲುವವರೆಗೂ ಶಿಕ್ಷಣ ಪರಿಣಾಮಕಾರಿ ಆಗುವುದಿಲ್ಲ. ಹಾಗಾಗಿ ಶಿಕ್ಷಕರ ಪ್ರಶಿಕ್ಷಣಕ್ಕಾಗಿ ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾಗಿದೆ. ಸಮಾಜದಲ್ಲಿರುವ ಕೆಲವು ಪ್ರಮುಖರ ಲೋಕಪ್ರಿಯತೆಯ ಕಾರಣದಿಂದಾಗಿ ಅನೇಕ ಜನರು ಅನುಕರಣೆ ಮಾಡುವಂತಹ ಪ್ರಮುಖರ ಜೀವನದ ಆಚರಣೆಯಲ್ಲಿ ಈ ಎಲ್ಲ ಅಂಶಗಳೂ ಕಾಣಸಿಗಬೇಕು. ಈ ವಿಚಾರಗಳನ್ನು ಮೊದಲಿಗೆ ಅಂತಹ ಪ್ರಮುಖರಿಗೆ ತಿಳಿಸಿಕೊಡಬೇಕು. ಅವರ ಪ್ರಭಾವದ ಕಾರಣಕ್ಕೆ ಸಮಾಜದಲ್ಲಿ ಉಂಟಾಗುವ ವಿಭಿನ್ನ ಪರಿಣಾಮದ ಮೂಲಕ ಜಾಗೃತಿ ಮೂಡಿಸಬಹುದು. ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡುವ ಎಲ್ಲ ಸಜ್ಜನರೂ ತಮ್ಮ ಸಾಮಾಜಿಕ ಜಾಲತಾಣ ಬಳಕೆಯನ್ನು ಸಮಾಜವನ್ನು ಜೋಡಿಸುವ ಸಲುವಾಗಿ ಬಳಸಬೇಕು. ಸಮಾಜವನ್ನು ಒಡೆಯಲು ಬಳಸಬಾರದು.

**ಶಿಕ್ಷಣದ ಮೂಲಾರಂಭ ಹಾಗೂ ಅದರ ಕಾರಣದಿಂದ ಆಗುವ ಸ್ವಭಾವಪ್ರವೃತ್ತಿಯು 3ರಿಂದ 12ನೇ ವರ್ಷದ ನಡುವೆಯೇ ಮನೆಯಲ್ಲೇ ರೂಪುಗೊಳ್ಳುತ್ತವೆ. ಮನೆಯಲ್ಲಿ ಹಿರಿಯರ ನಡವಳಿಕೆ, ಮನೆಯ ವಾತಾವರಣ ಹಾಗೂ ಮನೆಯಲ್ಲಿ ಉಂಟಾಗುವ ಆತ್ಮೀಯತೆಯುಕ್ತ ಮಾತುಕತೆಗಳ ಮೂಲಕ ಈ ಶಿಕ್ಷಣವು ಪ್ರಾಪ್ತವಾಗುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ ಮನೆಯ ಕುರಿತು ಆಲೋಚಿಸುತ್ತಲೇ, ಮನೆಗಳಲ್ಲಿ ಈ ರೀತಿಯ ಚರ್ಚೆಗಳನ್ನು ಆರಂಭಿಸಬೇಕಾಗಿದೆ. ದಿನನಿತ್ಯದ ಜೀವನದಲ್ಲಿ ಸಹಜವಾಗಿ ಈ ರೀತಿಯ ಸಂವಾದ ಸಾಧ್ಯವಾಗದು ಎಂದಾದರೆ ವಾರಕ್ಕೊಮ್ಮೆಯಾದರೂ ಮಾಡಬೇಕು. ಸ್ವ ಗೌರವ, ದೇಶಪ್ರೇಮ, ನೈತಿಕತೆ, ಸನ್ನಡತೆ, ಕರ್ತವ್ಯಪ್ರಜ್ಞೆ ಮುಂತಾದ ಅನೇಕ ಗುಣಗಳು ಇದೇ ಕಾಲಾವಧಿಯಲ್ಲೇ ನಿರ್ಮಾಣವಾಗುತ್ತವೆ. ಈ ವಿಚಾರವನ್ನು ತಿಳಿದುಕೊಂಡು ನಮ್ಮ ಮನೆಗಳಲ್ಲಿ ಆರಂಭಿಸಬೇಕಾಗಿದೆ.**

**ನಾಗರಿಕ ಕರ್ತವ್ಯ:** ಸಂಸ್ಕಾರಗಳ ಅಭಿವ್ಯಕ್ತಿಗೆ ಮತ್ತೊಂದು ಮಾರ್ಗವೆಂದರೆ ನಮ್ಮ ಸಾಮಾಜಿಕ ನಡವಳಿಕೆ. ಸಮಾಜದಲ್ಲಿ ನಾವು ಒಟ್ಟಿಗೆ ವಾಸಿಸುತ್ತೇವೆ. ಒಟ್ಟಿಗೆ ಸುಖದಿಂದ ವಾಸಿಸಲಿ ಎಂಬ ಕಾರಣಕ್ಕೆ ಕೆಲವು ನಿಯಮಗಳು ರೂಪಿತಗೊಂಡಿರುತ್ತವೆ. ದೇಶ ಕಾಲದ ಪರಿಸ್ಥಿತಿಗೆ ಅನುಗುಣವಾಗಿ ಅವುಗಳಲ್ಲಿ ಪರಿವರ್ತನೆಗಳೂ ಆಗುತ್ತಿರುತ್ತವೆ. ನಾವು ಒಟ್ಟಾಗಿ ಸುಖದಿಂದ ವಾಸಿಸಬೇಕೆಂದರೆ ಆ ನಿಯಮಗಳ ಪಾಲನೆಯು ಅನಿವಾರ್ಯವಾಗುತ್ತದೆ. ಒಟ್ಟಿಗೆ ವಾಸಿಸುತ್ತಿರುವಾಗ ಪರಸ್ಪರರ ನಡವಳಿಕೆಯಲ್ಲಿ ಕೆಲವು ಕರ್ತವ್ಯಗಳು ಹಾಗೂ ಅವುಗಳ ಪಾಲನೆ ನಡೆದುಕೊಂಡುಬರುತ್ತಿರುತ್ತದೆ. ಕಾನೂನು ಹಾಗೂ ಸಂವಿಧಾನವೂ ಒಂದು ರೀತಿಯಲ್ಲಿ ಸಾಮಾಜಿಕ ಅನುಶಾಸನವೇ ಆಗಿದೆ. ಸಮಾಜದಲ್ಲಿ ಎಲ್ಲರೂ ಸುಖದಿಂದ ಇರಲಿ, ಏಳಿಗೆ ಸಾಧಿಸುತ್ತಿರಲಿ, ಪ್ರತ್ಯೇಕವಾಗದಿರಲಿ ಎಂಬ ಕಾರಣಕ್ಕೆ ಅಧಿಷ್ಠಾನ ಅಥವಾ ನಿಯಮಗಳು ರೂಪುಗೊಂಡಿವೆ. ನಾವು ಭಾರತದ ನಾಗರಿಕರು ಈ ಸಂವಿಧಾನದ ಪಾಲನೆ ಕುರಿತು ಬದ್ಧತೆಯನ್ನು ವ್ಯಕ್ತಪಡಿಸಿದ್ದೇವೆ. ಸಂವಿಧಾನದ ಪೀಠಿಕೆಯ ಈ ವಾಕ್ಯವನ್ನು ಮನಸ್ಸಿನಲ್ಲಿರಿಸಿಕೊಂಡು ಸಂವಿಧಾನ ಸೂಚಿಸಿದ ಕರ್ತವ್ಯಗಳು ಹಾಗೂ ಕಾನೂನಿನ ಸೂಕ್ತ ಪಾಲನೆಯನ್ನು ಎಲ್ಲರೂ ಮಾಡಬೇಕು. ಸಣ್ಣದು ದೊಡ್ಡದು ಎಂಬ ಭೇದವಿಲ್ಲದೆ ಎಲ್ಲ ವಿಚಾರಗಳಲ್ಲೂ ನಾವು ಈ ನಿಯಮಗಳ ಪಾಲನೆ ಮಾಡಬೇಕು. ರಸ್ತೆ ನಿಯಮಗಳಿರಬಹುದು, ವಿವಿಧ ರೀತಿಯ ತೆರಿಗೆಗಳನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡುವುದಿರಬಹುದು, ವೈಯಕ್ತಿಕ ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರದಲ್ಲಿ ಶುದ್ಧತೆ ಹಾಗೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಅನುಶಾಸನವೇ ಇರಬಹುದು. ಇಂತಹ ಅನೇಕ ಪ್ರಕಾರದ ನಿಯಮಗಳನ್ನು ಕರ್ತವ್ಯ ಬುದ್ಧಿಯಿಂದ ಪೂರ್ಣಪಾಲನೆ ಮಾಡಬೇಕು.

**ಮನಸ್ಸು–ಮಾತು–ಕ್ರಿಯೆಯ ವಿವೇಕ:** ರಾಷ್ಟ್ರೀಯ ಚಾರಿತ್ರ್ಯಕ್ಕೆ ಸಂಬಂಧಿಸಿ ವ್ಯಾವಹಾರಿಕವಾದ ಒಂದು ಮಹತ್ವಪೂರ್ಣ ಅಂಶವೊಂದಿದೆ. ಅದೇನೆಂದರೆ ಯಾವುದೇ ಪ್ರಕಾರದ ಅತಿವಾದ ಹಾಗೂ ಕಾನೂನುಬಾಹಿರ ಪದ್ಧತಿಯಿಂದ ನಾವು ದೂರ ಇರುವುದು. ನಮ್ಮ ದೇಶವು ವಿವಿಧತೆಯಿಂದ ಕೂಡಿದೆ. ಅವುಗಳನ್ನು ನಾವು ಭಿನ್ನತೆ ಎಂದು ಭಾವಿಸುವುದಿಲ್ಲ, ಯಾರೂ ಭಾವಿಸಬಾರದು. ನಮ್ಮ ವಿವಿಧತೆಯು ಸೃಷ್ಟಿಯ ಸ್ವಾಭಾವಿಕ ವಿಶಿಷ್ಟತೆಯಾಗಿದೆ. ಇಷ್ಟೊಂದು ಪ್ರಾಚೀನ ಇತಿಹಾಸವಿರುವ, ವಿಶಾಲ ಭೂಪ್ರದೇಶವಿರುವ ಹಾಗೂ ಅಪಾರ ಜನಸಂಖ್ಯೆಯುಳ್ಳ ದೇಶದಲ್ಲಿ ಇಷ್ಟೊಂದು ವೈಶಿಷ್ಟ್ಯಗಳಿರುವುದು ಅತ್ಯಂತ ಸ್ವಾಭಾವಿಕವಾಗಿದೆ. ತಮ್ಮ ತಮ್ಮ ವಿಶಿಷ್ಟತೆಗಳ ಕುರಿತು ಗೌರವ ಹಾಗೂ ಅವುಗಳ ಕುರಿತು ತಮ್ಮ ತಮ್ಮ ಸಂವೇದನೆಯನ್ನು ಹೊಂದುವುದೂ ಸ್ವಾಭಾವಿಕವೇ ಆಗಿದೆ. ಈ ವಿವಿಧತೆಯ ಆಧಾರಿತವಾಗಿ ಸಮಾಜ ಜೀವನದಲ್ಲಿ ಹಾಗೂ ದೇಶದಲ್ಲಿ ನಡೆಯುವ ಎಲ್ಲ ಆಚರಣೆಗಳು ಹಾಗೂ ಮಾತುಗಳು ಎಲ್ಲ ಕಾಲದಲ್ಲಿಯೂ ಎಲ್ಲರಿಗೂ ಅನುಕೂಲಕರ ಅಥವಾ ಎಲ್ಲರನ್ನೂ ಸಂತೋಷಗೊಳಿಸುವುದೇ ಆಗಿರುತ್ತವೆ ಎಂದು ಹೇಳಲಾಗುವುದಿಲ್ಲ. ಪ್ರತಿಕ್ರಿಯೆ ನೀಡುವ ಭರದಲ್ಲಿ ಕಾನೂನನ್ನು ಗಾಳಿಗೆ ತೂರುತ್ತಾ ಕಾನೂನುಬಾಹಿರ ಹಾಗೂ ಹಿಂಸಾತ್ಮಕ ಮಾರ್ಗವನ್ನು ಅನುಸರಿಸಿ ತೊಂದರೆಯನ್ನು ಉಂಟುಮಾಡುವುದು, ಸಮಾಜದ ಒಂದು ವರ್ಗವನ್ನು ಘಟನೆಗೆ ಸಂಪೂರ್ಣ ಹೊಣೆಗಾರನನ್ನಾಗಿ ಮಾಡುವುದು, ಮನಸ್ಸು, ಮಾತು ಹಾಗೂ ಕ್ರಿಯೆಯಲ್ಲಿ ಮಿತಿಮೀರಿ ವರ್ತಿಸುವುದು ದೇಶದ ಹಿತದೃಷ್ಟಿಯಿಂದ, ದೇಶದಲ್ಲಿ ವಾಸಿಸುವ ಎಲ್ಲರ ಹಿತದೃಷ್ಟಿಯಿಂದ ಅಪೇಕ್ಷಿತವೂ ಅಲ್ಲ ಹಿತಕಾರಿಯೂ ಅಲ್ಲ. ಸಹಿಷ್ಣುತೆ ಹಾಗೂ ಸದ್ಭಾವನೆಯು ಭಾರತದ ಪರಂಪರೆ. ಅಸಹಿಷ್ಣುತೆ ಹಾಗೂ ದುರ್ಭಾವನೆಯು ಭಾರತ ವಿರೋಧಿ ಹಾಗೂ ಮಾನವ ವಿರೋಧಿ ದುರ್ಗುಣವಾಗಿದೆ. ಆದ್ದರಿಂದ, ಪ್ರಕ್ಷುಬ್ಧತೆ ಯಾವುದೇ ಪ್ರಮಾಣದಲ್ಲಿರಲಿ ಇಂತಹ ಅತಿವರ್ತನೆಗಳಿಂದ ನಮ್ಮನ್ನೂ ಹಾಗೂ ನಮ್ಮವರನ್ನೂ ದೂರವಿರಿಸಿಕೊಳ್ಳಬೇಕಿದೆ.

**ಶಕ್ತಿ ಹಾಗೂ ಶೀಲವೇ ಉನ್ನತಿಯ ಆಧಾರ:** ಜಗತ್ತು ಶಕ್ತಿಯನ್ನು ಒಪ್ಪುತ್ತದೆ. ಭಾರತವು ಶಕ್ತಿಶಾಲಿಯಾಗುವುದರಿಂದ ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಸದ್ಭಾವನೆ ಹಾಗೂ ಸಮತೋಲನ ರೂಪುಗೊಂಡು ಶಾಂತಿ ಮತ್ತು ಬಂಧುತ್ವದ ಕಡೆಗೆ ವಿಶ್ವ ಮುನ್ನಡೆಯುತ್ತದೆ. ಈ ವಿಚಾರವನ್ನು ವಿಶ್ವದ ಎಲ್ಲ ರಾಷ್ಟ್ರಗಳೂ ಬಲ್ಲವು. ಆದರೂ ತಮ್ಮ ವೈಯಕ್ತಿಕ ಸ್ವಾರ್ಥ ಹಾಗೂ ಅಹಂಕಾರ ಅಥವಾ ದ್ವೇಷವನ್ನೇ ಮೊದಲುಮಾಡಿಕೊಂಡು ಭಾರತವನ್ನು ಒಂದು ಸೀಮಿತತೆಗೆ ಕಟ್ಟಿಹಾಕುವ ಶಕ್ತಿಶಾಲಿ ದೇಶಗಳ ಕುಚೇಷ್ಟೆಯನ್ನು ನಾವೆಲ್ಲರೂ ಬಲ್ಲೆವು. ಭಾರತವರ್ಷದ ಶಕ್ತಿ ಎಷ್ಟು ಹೆಚ್ಚುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಭಾರತವರ್ಷದ ಸ್ವೀಕಾರಾರ್ಹತೆಯೂ ಉಳಿಯುತ್ತದೆ.



**ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಜಯದಶಮಿ ಕಾರ್ಯಕ್ರಮದಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಡಾ. ಕೆ. ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.**

'ಬಲಹೀನರನ್ನು ಯಾರೂ ಲೆಕ್ಕಿಸುವುದಿಲ್ಲ, ಬಲವಾನರನ್ನೇ ವಿಶ್ವವು ಲಕ್ಷಿಸುತ್ತದೆ' ಎನ್ನುವುದು ಈಗಿನ ಜಗತ್ತಿನ ರೀತಿನೀತಿ. ಆದ್ಧರಿಂದ ಈಗಾಗಲೆ ತಿಳಿಸಿದಂತೆ ಸದ್ಭಾವ ಹಾಗೂ ಸಂಯಮಪೂರ್ಣ ವಾತಾರಣದ ಸ್ಥಾಪನೆಗಾಗಿ ಸಜ್ಜನರು ಶಕ್ತಿಸಂಪನ್ನರಾಗಬೇಕು. ಶಕ್ತಿಯು ಯಾವಾಗ ಶೀಲಸಂಪನ್ನವಾಗುತ್ತದೆಯೋ ಆಗ ಅದು ಶಾಂತಿಯ ಆಧಾರವಾಗುತ್ತದೆ. ದುರ್ಜನರು ಸ್ವಾರ್ಥಕ್ಕಾಗಿ ಸಂಘಟಿತರಾಗಿರುತ್ತಾರೆ. ಅವರ ನಿಯಂತ್ರಣವನ್ನು ಶಕ್ತಿಶಾಲಿಗಳು ಮಾತ್ರವೇ ಮಾಡಬಲ್ಲರು. ಸಜ್ಜನರು ಎಲ್ಲರಲ್ಲೂ ಸದ್ಭಾವನೆಯನ್ನು ಹೊಂದಿರುತ್ತಾರಾದರೂ ಸಂಘಟಿತರಾಗುವುದನ್ನು ತಿಳಿದಿಲ್ಲ. ಆದ್ದರಿಂದಲೇ ಅವರು ದುರ್ಬಲರಂತೆ ಕಾಣುತ್ತಾರೆ. ಸಜ್ಜನರು ಈ ಸಂಘಟಿತ ಸಾಮರ್ಥ್ಯ ನಿರ್ಮಾಣದ ಕಲೆಯನ್ನು ಕಲಿಯಬೇಕಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘವು ಹಿಂದೂ ಸಮಾಜದ ಇದೇ ಶೀಲಸಂಪನ್ನ ಶಕ್ತಿಸಾಧನೆಯ ಹೆಸರಾಗಿದೆ. ಈ ಭಾಷಣದಲ್ಲಿ ಉಲ್ಲೇಖಿಸಿರುವ ಸದ್‌ವ್ಯವಹಾರಗಳ ಐದು ಅಂಶಗಳನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಸಜ್ಜನರನ್ನು ಜೋಡಿಸುವ ಕೆಲಸವನ್ನು ಸಂಘದ ಸ್ವಯಂಸೇವಕರು ಮಾಡುತ್ತಿದ್ದಾರೆ. ಭಾರತದ ಏಳಿಗೆಯನ್ನು ಸಹಿಸದವರು, ತಮ್ಮ ಸ್ವಾರ್ಥಕ್ಕಾಗಿ ಭಾರತ ವಿರೋಧಿಗಳ ಜತೆಗೆ ಕೈಜೋಡಿಸುವವರು ಹಾಗೂ ಸ್ವಭಾವತಃ ವೈರತ್ವ ಮತ್ತು ದ್ವೇಷಸಾಧನೆಯಲ್ಲೇ ಅನಂದವನ್ನು ಹೊಂದುವವರಂತಹ ಶಕ್ತಿಗಳಿಂದ ರಕ್ಷಿಸಿಕೊಂಡು ದೇಶವು ಮುನ್ನಡೆಯಬೇಕಾಗಿದೆ. ವಿಶ್ವದ ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ಏಳಿಗೆಯನ್ನು ಸಾಧಿಸುತ್ತ ಹೊಸ, ಸುಖ–ಶಾಂತಿ ಹಾಗೂ ಸದ್ಭಾವನೆಯುಕ್ತ ವಿಶ್ವವನ್ನು ನಿರ್ಮಿಸಲು ತಮ್ಮ ಕೊಡುಗೆಯನ್ನು ನೀಡಲಿವೆ. ■

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497    ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.